ಶ್ರೀಶಂಕರಾಚಾರ್ಯರವರ ಗ್ರಂಥಗಳು

# ಪ್ರಕರಣಗಳು

ಸಂಪುಟ ೨

(ಸ್ವಾತ್ಮನಿರೂಪಣ, ಮನೀಷಾಪಂಚಕ, ನಿರ್ವಾಣಷಟ್ಕ,
ಬ್ರಹ್ಮಾನುಚಿಂತನ, ಸದಾಚಾರಾನುಸಂಧಾನ, ದಶಶ್ಲೋಕೀ)

ಬರೆದವರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ – ೫೭೩ ೨೧೧
೨೦೦೨
ದೂರವಾಣಿ: ೦೮೧೭೫-೭ ೩೮೨೦

ಅಧ್ಯಾತ್ಮಗ್ರಂಥಾವಳಿ

ಶ್ರೀಶಂಕರಾಚಾರ್ಯವಿರಚಿತ

# ಸದಾಚಾರಾನುಸಂಧಾನ

ಸಂಸ್ಕೃತಮೂಲ, ಅನುವಾದ, ಟಿಪ್ಪಣಿ – ಮುಂತಾದವುಗಳೊಡನೆ

ಬರೆದವರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೨೭

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
(ಪಬ್ಲಿಕ್ ಛಾರಿಟಬಲ್ ಟ್ರಸ್ಟ್)
ಹೊಳೆನರಸೀಪುರ.
೨೦೦೨

ಮೊದಲನೆಯ ಸಂಸ್ಕರಣ ೧೯೫೬ (೧೦೦೦ ಪ್ರತಿಗಳು)
ಎರಡನೆಯ ಮುದ್ರಣ ೨೦೦೨ (೧೦೦೦ ಪ್ರತಿಗಳು)

© ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು

**All Rights Reserved**

ಅಕ್ಷರಜೋಡಣೆ :

**ಪ್ರಶಾಂತ್ ಎಂಟರ್‌ಪ್ರೈಸಸ್**

ನಂ. ೪೫, ೩ನೇ ಮುಖ್ಯರಸ್ತೆ, ನಾಗಸಂದ್ರ,
ತ್ಯಾಗರಾಜನಗರ ಅಂಚೆ, ಬೆಂಗಳೂರು – ೨೮
✆ ೬೭೬೪೬೫೦

ಮುದ್ರಣಸ್ಥಾನ :

**ಸ್ಟಾಂಡರ್ಡ್ ಪ್ರಿಂಟರ್ಸ್**

ಶಂಕರ ಮಠದ ರಸ್ತೆ, ಶಂಕರಪುರಂ
ಬೆಂಗಳೂರು – ೫೬೦ ೦೦೪
✆ ೬೫೨೧೫೨೭

# ಪೀಠಿಕೆ

ಈ ಗ್ರಂಥವನ್ನು ವಾಣೀವಿಲಾಸಮುದ್ರಣಾಲಯದ ಸಂಗ್ರಹ ಮತ್ತು ಅಷ್ಟೇಕರ್ ಕಂಪನಿಯ ಸಂಗ್ರಹ – ಈ ಎರಡರ ಆಧಾರದಿಂದ ಬರೆದುಕೊಳ್ಳಲಾಗಿದೆ.

ಈ ಎರಡು ಅಚ್ಚಿನ ಪ್ರಕಟನೆಗಳಲ್ಲಿ ಯಾವ ಪಾಠಭೇದವೂ ಇಲ್ಲ. ಆದ್ದರಿಂದ ಮೂಲವನ್ನು ಶೋಧನೆಮಾಡುವದಕ್ಕೆ ಹೆಚ್ಚಿನ ಸಾಧನವು ಯಾವದೂ ಇಲ್ಲದೆ, ಅರ್ಥವನ್ನವಲಂಬಿಸಿ ಅತ್ಯವಶ್ಯವಾದ ಮಾರ್ಪಾಡುಗಳನ್ನು ಮಾತ್ರ ಮಾಡಿಕೊಳ್ಳಲಾಗಿದೆ.

ಗ್ರಂಥವು ಶಂಕರಾಚಾರ್ಯರದಲ್ಲವೆಂಬುದಕ್ಕೆ ಕೆಲವು ಆಧಾರಗಳು ಮೂಲದಲ್ಲಿ ಕಾಣುತ್ತಿವೆ. ಅವನ್ನು ಟಿಪ್ಪಣಿಗಳಲ್ಲಿ ಅಲ್ಲಲ್ಲಿ ತಿಳಿಸುತ್ತಾ ಬಂದಿದೇನೆ. ಶಬ್ದಾನುಕ್ರಮಣಿಕೆ ಯಿಂದಲೂ ಈ ವಿಷಯಕ್ಕೆ ಕೆಲವು ಆಧಾರಗಳು ಸಿಕ್ಕುತ್ತವೆ.

ಗ್ರಂಥವು ಯಾರದ್ದೇ ಆಗಿರಲಿ, ಜ್ಞಾನದ ಮಾಹಾತ್ಮ್ಯವನ್ನು ಮನಗಾಣಿಸುವದಕ್ಕೆ ಇದು ಸಾಧನವಾಗುವಂತಿದೆ. ಜ್ಞಾನಿಯಾದವನಲ್ಲಿ ಸರ್ವಸದಾಚಾರಗಳ ಫಲವೂ ಸ್ವಭಾವದಿಂದ ಕಾಣಿಸಿಕೊಳ್ಳುತ್ತದೆ ಎಂಬುದರಲ್ಲಿ ಪ್ರಕರಣದ ಒಟ್ಟು ತಾತ್ಪರ್ಯವಿದೆ.

ದುರ್ಮುಖಿಸಂವತ್ಸರ,<br>
ಜ್ಯೇಷ್ಠ ಶುದ್ಧ 3 (1956)

ಅನುವಾದಕ.

-----

# ವಿಷಯಾನುಕ್ರಮಣಿಕೆ


| | ಪುಟ |
|---|---|
| ಮಂಗಲ, ಗ್ರಂಥಾರಂಭಪ್ರತಿಜ್ಞೆ | ೧ |
| ಬೆಳಗ್ಗೆ ಮಾಡಬೇಕಾದ ಸ್ಮರಣೆ | ೧ |
| ಶೌಚಾದಿಗಳ ಅಧ್ಯಾತ್ಮಪರವಾದ ಅರ್ಥ | ೨ |
| ಜ್ಞಾನಕ್ಕೆ ಸಾಧನಗಳು | ೫ |
| ಸದ್ಗುರುವಿನ ಬೋಧೆಯಿಂದ ತತ್ತ್ವಜ್ಞಾನ | ೭ |
| ವೇದಾಂತದರ್ಶನದ ಹೆಚ್ಚುಗಾರಿಕೆ | ೮ |
| ತತ್ತ್ವಜ್ಞಾನದ ಸ್ವರೂಪ | ೧೦ |
| ಅಜ್ಞಾನವೂ ವಿಜ್ಞಾನವೂ | ೧೨ |
| ಭೋಕ್ತೃಭೋಗ್ಯಭೋಗಾದಿವಿಭಾಗ | ೧೪ |
| ಜ್ಞಾನಿಯೇ ನಿಜವಾಗಿ ಆಶ್ರಮಿಯು | ೧೫ |
| ಉಪಸಂಹಾರ | ೧೬ |


-----

॥ ಓಂ ॥

# ಸದಾಚಾರಾನುಸಂಧಾನಮ್

## ಮಂಗಲ, ಗ್ರಂಥಾರಂಭಪ್ರತಿಜ್ಞೆ

**ಸಚ್ಚಿದಾನನ್ದಕನ್ದಾಯ ಜಗದಙ್ಕುರಹೇತವೇ ।**
**ಸದೋದಿತಾಯ ಪೂರ್ಣಾಯ ನಮೋಽನನ್ತಾಯ ವಿಷ್ಣವೇ ॥೧॥**

೧. ಜಗತ್ತೆಂಬ ಮೊಳಕೆಗೆ ಕಾರಣವಾಗಿರುವ ಸಚ್ಚಿದಾನಂದವೆಂಬ ಮೂಲವೆನಿಸುವ ಎಂದೆಂದಿಗೂ ಇದ್ದುಕೊಂಡು ಪೂರ್ಣನಾಗಿ ಅನಂತನಾಗಿರುವ ವಿಷ್ಣುವಿಗೆ ನಮಸ್ಕಾರ !

**ಸರ್ವವೇದಾನ್ತಸಿದ್ಧಾನ್ತೈರ್ಗ್ರಥಿತಂ ನಿರ್ಮಲಂ ಶಿವಮ್ ।**
**ಸದಾಚಾರಂ ಪ್ರವಕ್ಷ್ಯಾಮಿ ಯೋಗಿನಾಂ ಜ್ಞಾನಸಿದ್ಧಯೇ ॥೨॥**

೨. ಸರ್ವವೇದಾಂತಸಿದ್ಧಾಂತಗಳಿಂದ[1] ಗ್ರಂಥರೂಪವಾಗಿ ಹೇಳಿರುವ ನಿರ್ಮಲವಾದ ಮಂಗಲಕರವಾದ ಸದಾಚಾರವನ್ನು ಯೋಗಿಗಳಿಗೆ[2] ಜ್ಞಾನವು ಸಿದ್ಧವಾಗುವದಕ್ಕಾಗಿ ಹೇಳುವೆನು.

## ಬೆಳಗ್ಗೆ ಮಾಡಬೇಕಾದ ಸ್ಮರಣೆ

**ಪ್ರಾತಃ ಸ್ಮರಾಮಿ ದೇವಸ್ಯ ಸವಿತುರ್ಭರ್ಗ ಆತ್ಮನಃ ।**
**ವರೇಣ್ಯಂ ತದ್ಧಿಯೋ ಯೋ ನಶ್ಚಿದಾನನ್ದೇ ಪ್ರಚೋದಯಾತ್ ॥೩॥**

೩. ಜಗತ್ಕಾರಣನಾದ ಪರಮಾತ್ಮನೆಂಬ ದೇವನ ವರಣೀಯವಾದ ಚೈತನ್ಯಪ್ರಕಾಶವನ್ನು ಪ್ರಾತಃಕಾಲದಲ್ಲಿ ಸ್ಮರಿಸುತ್ತೇನೆ.[3] ಆತನು ನಮ್ಮಗಳ ಬುದ್ಧಿವೃತ್ತಿಗಳನ್ನು ಚಿದಾನಂದದಲ್ಲಿರುವಂತೆ ಪ್ರೇರಿಸಲಿ !

---

1.ವೇದಾಂತಸಿದ್ಧಾಂತಗಳ ಆಧಾರದಿಂದ ಎಂದು ಅರ್ಥಮಾಡಿಕೊಳ್ಳಬೇಕು. ಏಕೆಂದರೆ ವೇದಾಂತಸಿದ್ಧಾಂತಗಳೇನೂ ಈ ಗ್ರಂಥಕ್ಕೆ ಕರ್ತೃಗಳಲ್ಲ.

2.ಸಾಧಕರಿಗೆ, ಮುಮುಕ್ಷುಗಳಿಗೆ ಎಂದರ್ಥ. ಇಲ್ಲಿ ಯೋಗಾಭ್ಯಾಸವನ್ನೇನೂ ಹೇಳಿಲ್ಲ.

3.'ಸ್ಮರಾಮಿ' ಎಂಬುದು 'ಸ್ಮರಾಮೋ' ಎಂದಿದ್ದರೆ ಸ್ಮರಿಸುತ್ತೇವೆ ಎಂದು ಅರ್ಥವನ್ನು ಮಾಡಿಕೊಳ್ಳಬೇಕು. ಆಗ ಮುಂದಿನ ವಾಕ್ಯಶೇಷದಲ್ಲಿರುವ ಬಹುವಚನಕ್ಕೂ ಹೊಂದುಗೆಯಾಗುತ್ತದೆ.

ಅನ್ವಯವ್ಯತಿರೇಕಾಭ್ಯಾಂ ಜಾಗ್ರತ್ಸ್ವಪ್ನಸುಷುಪ್ತಿಷು ।
ಯದೇಕಂ ಕೇವಲಂ ಜ್ಞಾನಂ ತದೇವಾಽಸ್ಮಿ ಪರಂ ಬೃಹತ್ ॥೪॥

೪. ಅನ್ವಯವ್ಯತಿರೇಕಗಳಿಂದ[1] ಜಾಗ್ರತ್ಸ್ವಪ್ನಸುಷುಪ್ತಿಗಳಲ್ಲಿ ತಾನೊಂದೇ ಇರುವ ಚೈತನ್ಯವು ಯಾವದು (ತಿಳಿಯಬರುವದೋ) ಆ ಪರಬ್ರಹ್ಮವೇ ನಾನು.

ಜ್ಞಾನಾಜ್ಞಾನವಿಲಾಸೋಽಯಂ ಜ್ಞಾನಾಜ್ಞಾನೇ ಚ ಶಾಮ್ಯತಿ ।
ಜ್ಞಾನಾಜ್ಞಾನೇ ಪರಿತ್ಯಜ್ಯ ಜ್ಞಾನಮೇವಾವಶಿಷ್ಯತೇ ॥೫॥

೫. ಜ್ಞಾನಾಜ್ಞಾನಗಳ ಈ ವಿಲಾಸವು ಜ್ಞಾನಾಜ್ಞಾನದಲ್ಲಿ ಶಾಂತವಾಗುತ್ತದೆ.[2] ಜ್ಞಾನಾಜ್ಞಾನಗಳನ್ನು ಬಿಟ್ಟುಬಿಟ್ಟರೆ ಜ್ಞಾನವೇ ಉಳಿದುಕೊಳ್ಳುತ್ತದೆ.[3]

## ಶೌಚಾದಿಗಳ ಅಧ್ಯಾತ್ಮಪರವಾದ ಅರ್ಥ

ಅತ್ಯನ್ತಮಲಿನೋ ದೇಹೋ ದೇಹೀ ಚಾತ್ಯನ್ತನಿರ್ಮಲಃ ।
ಅಸಙ್ಗೋಽಹಮಿತಿ ಜ್ಞಾತ್ವಾ ಶೌಚಮೇತತ್ ಪ್ರಚಕ್ಷತೇ[4] ॥೬॥

೬. ದೇಹವು ಅತ್ಯಂತ ಮಲಿನವಾಗಿರುತ್ತದೆ ; ದೇಹಿಯಾದ ಆತ್ಮನು ಅತ್ಯಂತನಿರ್ಮಲನಾಗಿರುತ್ತಾನೆ. ನಾನು ಅಸಂಗನು. ಹೀಗೆಂದು ಅರಿತುಕೊಂಡರೆ ಇದೇ ಶೌಚವೆಂದು (ಬಲ್ಲವರು) ಹೇಳುತ್ತಾರೆ.

ಮನ್ಮನೋ ಮೀನವನ್ನಿತ್ಯಂ ಕ್ರೀಡತ್ಯಾನನ್ದವಾರಿಧೌ ।
ಸುಸ್ನಾತಸ್ತೇನ ಪೂತಾತ್ಮಾ ಸಮ್ಯಗ್ವಿಜ್ಞಾನವಾರಿಣಾ ॥೭॥

---

1. ಆತ್ಮಚೈತನ್ಯವು ಎಲ್ಲಾ ಅವಸ್ಥೆಗಳಲ್ಲಿಯೂ ಅನುಗತವಾಗಿರುತ್ತದೆ ಎಂಬುದು ಅನ್ವಯ ; ಅವಸ್ಥೆಗಳೂ ಅದರಲ್ಲಿರುವ ಗ್ರಾಹ್ಯಗ್ರಾಹಕಪ್ರಪಂಚವೂ ಒಂದು ಇರುವಾಗ ಮತ್ತೆರಡು ಇರುವದಿಲ್ಲ ಎಂಬುದು ವ್ಯತಿರೇಕವು.

2. ಅಜ್ಞಾನದ ವಿಲಾಸವು ಅನಾತ್ಮಪ್ರಪಂಚದ ಸತ್ಯತ್ವವು ; ಅದು ಸುಷುಪ್ತ್ಯಾದಿಗಳಲ್ಲಿ ಅಜ್ಞಾನದಲ್ಲಿ ಲಯವಾಗುವದು, ಜ್ಞಾನದ ವಿಲಾಸವು ಅನಾತ್ಮವೆಲ್ಲ ಮಿಥ್ಯೆ, ಆತ್ಮನೇ ಸತ್ಯ– ಎಂಬುದು ; ಅದು ಸರಿಯಾದ ಜ್ಞಾನವುಂಟಾದಾಗ ಜ್ಞಾನಮಾತ್ರದಲ್ಲಿ ಲಯವಾಗುವದು.

3. ಜ್ಞಾನಾಜ್ಞಾನವಿಭಾಗವೂ ಅಂತಃಕರಣದ ಧರ್ಮವೇ ಆದ್ದರಿಂದ ಆವಿದ್ಯಕವೇ ಎಂದು ಅರಿತುಕೊಂಡಾಗ ಆತ್ಮಚೈತನ್ಯರೂಪಜ್ಞಾನವೊಂದೇ ಉಳಿದುಕೊಳ್ಳುವದು.

4. 'ಉಭಯೋಽರನ್ತರಂ ಜ್ಞಾತ್ವಾ ಕಸ್ಯ ಶೌಚಂ ವಿಧೀಯತೇ' ಎಂಬ ಉತ್ತರಾರ್ಧವು ಸ್ಥಲಾಂತರದಲ್ಲಿ ದೊರೆಯುತ್ತದೆ. ಮೈತ್ರೇಯ್ಯುಪನಿಷತ್ತು ೨–೮, ೯ಕ್ಕೆ ಈ ವಾಕ್ಯವನ್ನು ಹೋಲಿಸಿರಿ.

೭. ನನ್ನ ಮನಸ್ಸು ಮೀನಿನ ಹಾಗೆ[1] ಆನಂದಸಾಗರದಲ್ಲಿ ನಿತ್ಯವೂ ಆಡುತ್ತಿರುತ್ತದೆ. ಆ ವಿಜ್ಞಾನವೆಂಬ ನೀರಿನಿಂದ ನಾನು ಚೆನ್ನಾಗಿ ಸ್ನಾನಮಾಡಿ ಶುದ್ಧಾತ್ಮನಾಗಿರುವೆನು.

**ಅಥಾಘಮರ್ಷಣಂ ಕುರ್ಯಾತ್ ಪ್ರಾಣಾಪಾನನಿರೋಧತಃ ।**
**ಮನಃ ಪೂರ್ಣೇ ಸಮಾಧಾಯ ಮಗ್ನಕುಮ್ಭೋ ಯಥಾರ್ಣವೇ ॥೮॥**

೮. ಇನ್ನು ಪೂರ್ಣಾತ್ಮನಲ್ಲಿ – ಮುಳುಗಿದ ಕೊಡವು ಸಮುದ್ರದಲ್ಲಿರುವಂತೆ[2]– ಮನಸ್ಸನ್ನು ಸರಿಯಾಗಿಟ್ಟುಕೊಂಡು ಪ್ರಾಣಾಪಾನಗಳನ್ನು ನಿಲ್ಲಿಸಿಕೊಂಡು ಅಘಮರ್ಷಣವನ್ನು[3] ಮಾಡಬೇಕು.

**ಲಯವಿಕ್ಷೇಪಯೋಃ ಸನ್ಧೌ ಮನಸ್ತತ್ರ ನಿರಾಮಿಷಮ್ ।**
**ಸ ಸಂಧಿಃ ಸಾಧಿತೋ ಯೇನ ಸ ಮುಕ್ತೋ ನಾತ್ರ ಸಂಶಯಃ ॥೯॥**

೯. ಲಯವಿಕ್ಷೇಪಗಳ ಸಂಧಿಯಲ್ಲಿ ಮನಸ್ಸು ಅಲ್ಲಿ ಯಾವ ಆಹಾರವೂ ಇಲ್ಲದಿರುವದು.[4] ಆ ಸಂಧಿಯನ್ನು ಯಾವನು ಸಾಧಿಸಿಕೊಂಡಿರುವನೋ ಅವನು ಮುಕ್ತನು, ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ.[5]

**ಸರ್ವತ್ರ ಪ್ರಾಣಿನಾಂ ದೇಹೇ ಜಪೋ ಭವತಿ ಸರ್ವದಾ ।**
**ಹಂಸಃ ಸೋಽಹಮಿತಿ ಜ್ಞಾತ್ವಾ ಸರ್ವಬನ್ಧೈರ್ವಿಮುಚ್ಯತೇ ॥೧೦॥**

೧೦. ಎಲ್ಲಾ ಪ್ರಾಣಿಗಳ ದೇಹದಲ್ಲಿಯೂ 'ಹಂಸಃ ಸೋಽಹಮ್'

---

1.ಮೀನು ಯಾವಾಗಲೂ ನೀರಿನಲ್ಲಿಯೇ ಸ್ವಭಾವದಿಂದ ಸಂಚರಿಸುತ್ತಿರುವಂತೆ.

2.ಮನಸ್ಸು ಸರ್ವತ್ರವೂ ಇರುವ ಆತ್ಮನಲ್ಲಿ ಮುಳುಗಿರಬೇಕೆಂಬುದಕ್ಕೆ ಮಾತ್ರ ದೃಷ್ಟಾಂತವಿದು. ಕೊಡವು ತಾನೇ ಬೇರೆಯಿರುವಂತೆ ಮನಸ್ಸು ಮನಸ್ಸಾಗಿರಬೇಕೆಂಬುದೇನೂ ವಿವಕ್ಷಿತವಲ್ಲ.

3.ಇಲ್ಲಿ ಅಘವೆಂದರೆ ಪಾಪಪುಣ್ಯಗಳೆರಡನ್ನೂ ತೆಗೆದುಕೊಳ್ಳಬೇಕು ; ಅಘಮರ್ಷಣ ಸ್ನಾನದಿಂದ ಪಾಪವು ಹೋಗುವಂತೆ ಪರಮಾತ್ಮನ ಧ್ಯಾನದಿಂದ ಪಾಪಪುಣ್ಯಗಳೆರಡೂ ತೊಲಗುತ್ತವೆ ಎಂದರ್ಥ.

4. ಆಮಿಷವೆಂದರೆ ಮಾಂಸವು, ಮನಸ್ಸಿಗೆ ವಿಷಯಸೇವನವು ಮಾಂಸಾಹಾರದಂತೆ ಕ್ರೋಧಾದಿದೋಷಗಳನ್ನು ಹೆಚ್ಚಿಸುತ್ತದೆಯೆಂಬ ಸೂಚನೆ ಇಲ್ಲಿದೆ.

5.ಈ ವಾಕ್ಯವು ಅಘಮರ್ಷಣವನ್ನು ಹೇಗೆ ಮಾಡಬೇಕೆಂಬುದರ ವಿವರಣೆಯಾಗಿರಬಹುದು; ಅಥವಾ ಸಂಧ್ಯೋಪಾಸನೆಯ ಪರಾಮರ್ಶಕವಾಗಿರಬಹುದು. ಲಯವಿಕ್ಷೇಪಗಳ ಸಂಧಿ ಎಂದರೆ ಆತ್ಮನೇ.

(ಆ ಪರಮಾತ್ಮನೇ ನಾನು) ಎಂಬ ಜಪವು ಯಾವಾಗಲೂ ಆಗುತ್ತಿರುವದು.[1] ಹೀಗೆಂಬುದನ್ನು ಅರಿತುಕೊಂಡರೆ ಸರ್ವಬಂಧಗಳಿಂದಲೂ ಮುಕ್ತನಾಗುತ್ತಾನೆ.

**ತರ್ಪಣಂ ಸ್ವಸುಖೇನೈವ ಸ್ವೇನ್ದ್ರಿಯಾಣಾಂ ಪ್ರತರ್ಪಣಮ್ ।**
**ಮನಸಾ ಮನ ಆಲೋಕ್ಯ ಸ್ವಯಮಾತ್ಮಾ ಪ್ರಕಾಶತೇ ॥೧೧॥**

೧೧. ತನ್ನ ಇಂದ್ರಿಯಗಳಿಗೆ ತನ್ನ ಸುಖದಿಂದಲೇ[2] ತೃಪ್ತಿಯನ್ನುಂಟು ಮಾಡುವದು ತರ್ಪಣ. ಮನಸ್ಸಿನಿಂದ ಮನಸ್ಸನ್ನು ನೋಡುತ್ತಿದ್ದರೆ ಆತ್ಮನು ತಾನೇ ಪ್ರಕಾಶವಾಗುತ್ತಾನೆ.[3]

**ಆತ್ಮನಿ ಸ್ವಪ್ರಕಾಶಾಗ್ನೌ ಚಿತ್ತಮೇಕಾಹುತಿಂ ಕ್ಷಿಪೇತ್ ।**
**ಅಗ್ನಿಹೋತ್ರೀ ಸ ವಿಜ್ಞೇಯಶ್ಚೇತರೇ[4] ನಾಮಧಾರಕಾಃ ॥೧೨॥**

೧೨. ಸ್ವಯಂಪ್ರಕಾಶವಾಗಿರುವ ಆತ್ಮನೆಂಬ ಅಗ್ನಿಯಲ್ಲಿ ಚಿತ್ತವನ್ನು ಏಕಾಹುತಿಯಾಗಿ ಹಾಕಬೇಕು.[5] ಅವನೇ (ನಿಜವಾಗಿ) **ಅಗ್ನಿಹೋತ್ರಿಯು,** ಉಳಿದವರು ಆ ಹೆಸರನ್ನು ಮಾತ್ರ ಧರಿಸಿರುವವರು.

**ದೇಹೋ ದೇವಾಲಯಃ ಪ್ರೋಕ್ತೋ ದೇಹೀ ದೇವೋ ನಿರಞ್ಜನಃ ।**
**ಅರ್ಚಿತಃ ಸರ್ವಭಾವೇನ ಸ್ವಾನುಭೂತ್ಯಾ ವಿರಾಜತೇ ॥೧೩॥**

೧೩. ದೇಹವೇ ದೇವಾಲಯವೆನಿಸುವದು, ದೇಹಿಯಾದ (ಜೀವನು) ನಿರಂಜನನಾದ ಪರಮಾತ್ಮನೇ. ಸರ್ವಭಾವದಿಂದ[6] ಅವನನ್ನು ಅರ್ಚನೆ ಮಾಡಿದರೆ ತನ್ನ ಅನುಭವದಿಂದ ಬೆಳಗಿತೋರುತ್ತಾನೆ.

---

1. ಇದು ನಿತ್ಯವೂ ನಡೆಯುತ್ತಿರುವ ಪ್ರಾಣಾಪಾನವಾಯುಗಳ ವ್ಯಾಪಾರಕ್ಕೂ ಎದ್ದು ಲಯವಾಗುತ್ತಿರುವ ಮನಸ್ಸಿನ ವೃತ್ತಿಗಳಿಗೂ ಅನ್ವಯಿಸುತ್ತದೆ.

2. ಆತ್ಮಸ್ವರೂಪವಾದ ಆನಂದದಿಂದಲೇ ಎಂದರ್ಥ ; ವಿಷಯಾನಂದವೂ ನಿಜವಾಗಿ ಆತ್ಮಾನಂದದ ಅಂಶವೇ ಎಂಬುದಕ್ಕೆ ಬೃ.೪–೩–೩೨ನ್ನು ನೋಡಿ.

3. ಮನಸ್ಸು ತನ್ನನ್ನು ತಾನೇ ನೋಡುತ್ತಿದ್ದರೆ ಆತ್ಮನಲ್ಲಿ ಲಯವಾಗುತ್ತದೆ ಎಂದರ್ಥ ; ಅಥವಾ ಅಂತಃಕರಣಸಮೇತವಾದ ಎಲ್ಲವನ್ನೂ ನೋಡುತ್ತಿರುವ ಸಾಕ್ಷಿಯೇ ಆತ್ಮನೆಂಬುದು ಕ್ರಮಕ್ರಮವಾಗಿ ಹೊಳೆಯುವದು– ಎಂದಾದರೂ ಅರ್ಥವಿರಬಹುದು.

4. 'ಇತರಾ' ಎಂದು ಪಾ ॥

5. ಆತ್ಮರೂಪದಲ್ಲಿ ಲಯಮಾಡಿಕೊಳ್ಳಬೇಕು, ಆತ್ಮನೇ ಎಂದು ಅರಿತುಕೊಳ್ಳಬೇಕು.

6. ಅವನೇ ಸರ್ವವೆಂದು.

# ಜ್ಞಾನಕ್ಕೆ ಸಾಧನಗಳು

**ಮೌನಂ ಸ್ವಾಧ್ಯಯನಂ ಧ್ಯಾನಂ ಧ್ಯೇಯ[1] ಬ್ರಹ್ಮಾನುಚಿನ್ತನಮ್ ।**
**ಜ್ಞಾನೇನೇತಿ ತಯೋಃ ಸಮ್ಯಙ್ನಿಷೇಧಾತ್ ತತ್ತ್ವದರ್ಶನಮ್ ॥೧೪॥**

೧೪. ಮೌನವೇ ಸ್ವಾಧ್ಯಾಯವು,[2] ಧ್ಯಾನವೆಂದರೆ ಧ್ಯೇಯವಾದ ಬ್ರಹ್ಮವನ್ನು ಅನುಚಿಂತನೆಮಾಡುವದೇ.[3] ಹೀಗೆಂದು ಆ ಎರಡನ್ನೂ ಜ್ಞಾನದಿಂದ ಚೆನ್ನಾಗಿ ಬಿಟ್ಟುಬಿಡುವದರಿಂದ ತತ್ವದರ್ಶನವಾಗುವದು.[4]

**ಅತೀತಾನಾಗತಂ ಕಿಂಚಿನ್ನ ಸ್ಮರಾಮಿ ನ ಚಿನ್ತಯೇ ।**
**ರಾಗದ್ವೇಷಂ ವಿನಾ ಪ್ರಾಪ್ತಂ ಭುಞ್ಜಾಮ್ಯತ್ರ ಶುಭಾಶುಭಮ್ ॥೧೫॥**

೧೫. ಹಿಂದೆ ಆಗಿಹೋದದ್ದನ್ನಾಗಲಿ ಮುಂದೆ ಬರಲಿರುವದನ್ನಾಗಲಿ ಯಾವದನ್ನೂ ನಾನು ಸ್ಮರಿಸುವದೂ ಇಲ್ಲ, ಮನಸ್ಸಿಗೆ ಹತ್ತಿಸಿಕೊಳ್ಳುವದೂ ಇಲ್ಲ. (ಈಗ) ಪ್ರಾಪ್ತವಾದ ಶುಭಾಶುಭ(ವಿಷಯವನ್ನು) ರಾಗದ್ವೇಷಗಳಿಲ್ಲದೆ ಭೋಗಿಸುತ್ತಿರುವೆನು.[5]

**ದೇಹಾಭ್ಯಾಸೋ ಹಿ ಸಂನ್ಯಾಸೋ ನೈವ ಕಾಷಾಯವಾಸಸಾ ।**
**ನಾಹಂ ದೇಹೋಽಹಮಾತ್ಮೇತಿ ನಿಶ್ಚಯೋ ನ್ಯಾಸಲಕ್ಷಣಮ್ ॥೧೬॥**

೧೬. ಕಾಷಾಯದ ಬಟ್ಟೆಯಿಂದ ದೇಹಾತ್ಮಾಭ್ಯಾಸವೇ ಆಗುವದೇ ಹೊರತು ಸಂನ್ಯಾಸವಾಗುವದೇ ಇಲ್ಲ. ನಾನು ದೇಹವಲ್ಲ, ನಾನು ಆತ್ಮನೇ ಎಂಬ ನಿಶ್ಚಯವೇ ಸಂನ್ಯಾಸದ ಲಕ್ಷಣವು.[6]

---

1.'ಧ್ಯೇಯಂ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

2.ಅಧ್ಯಯನವು.

3.ಇದೇ ನಿದಿಧ್ಯಾಸನವು ಅಥವಾ ಧ್ಯಾನಯೋಗವು.

4.ಸ್ವಾಧ್ಯಾಯ ಮತ್ತು ಭಾವನಾರೂಪವಾದ ಧ್ಯಾನ – ಇವೆರಡನ್ನೂ ಬಿಟ್ಟು ಪರಮಾತ್ಮ ವಿಚಾರದಿಂದಲೇ ಜ್ಞಾನಕ್ಕೆ ಹವಣಿಸುವದರಿಂದ ಎಂದರ್ಥ.

5.ಗೀ. ೩–೩೪. ಇಂದ್ರಿಯಗಳಿಗೆ ವಿಷಯಗಳಲ್ಲಿ ರಾಗದ್ವೇಷಗಳು ವ್ಯವಸ್ಥಿತವಾಗಿದ್ದರೂ ಅವಕ್ಕೆ ಜ್ಞಾನಿಯು ವಶನಾಗದೆ ಇರುವನು– ಎಂದು ಭಾವ.

6.ಹೊರಗಿನ ವೇಷಕ್ಕಿಂತಲೂ ಮನಸ್ಸಿನ ನಿಶ್ಚಯವೇ ನಿಜವಾದ ಸಂನ್ಯಾಸಕ್ಕೆ ಮುಖ್ಯ ಸಾಧನವೆಂದು ಭಾವ. ಮೈತ್ರೇಯ್ಯುಪನಿಷತ್ತಿನ ೨–೧೭ ರಿಂದ ೨೦ರವರೆಗಿನ ಮಂತ್ರಗಳನ್ನು ನೋಡಿರಿ.

**ಅಭಯಂ ಸರ್ವಭೂತಾನಾಂ ದಾನಮಾಹುರ್ಮನೀಷಿಣಃ ।**
**ನಿಜಾನನ್ದೇ ಸ್ಪೃಹಾ ನಾನ್ಯೇ ವೈರಾಗ್ಯಸ್ಯಾವಧಿರ್ಮತಾ ॥೧೭॥**

೧೭. ಸರ್ವಭೂತಗಳಿಗೂ ಅಭಯವನ್ನು ಕೊಡುವದೇ (ನಿಜವಾದ) ದಾನವೆಂದು ಬಲ್ಲವರು ಹೇಳುತ್ತಾರೆ.[1] ತನ್ನ ಆನಂದದಲ್ಲಿಯೇ ಹೊರತು ಮತ್ತೊಂದರಲ್ಲಿ ಆಸೆಯಿಲ್ಲದಿರುವದು ವೈರಾಗ್ಯಕ್ಕೆ ಅವಧಿಯೆನಿಸುವದು.

**ವೇದಾನ್ತಶ್ರವಣಂ ಕುರ್ಯಾನ್ಮನನಂ ಚೋಪಪತ್ತಿಭಿಃ ।**
**ಯೋಗೇನಾಭ್ಯಸನಂ ನಿತ್ಯಂ ತತೋ ದರ್ಶನಮಾತ್ಮನಃ ॥೧೮॥**

೧೮. ವೇದಾಂತಗಳ ಶ್ರವಣವನ್ನು ಮಾಡಬೇಕು, (ಅದರ ಅರ್ಥದ) ಮನನವನ್ನು ಉಪಪತ್ತಿಗಳಿಂದ ಮಾಡುತ್ತಿರಬೇಕು, ಯೋಗದಿಂದ[2] ನಿತ್ಯವೂ ಅಭ್ಯಾಸವನ್ನು ಮಾಡುತ್ತಿರಬೇಕು. ಇದರಿಂದ ಆತ್ಮನ ದರ್ಶನವಾಗುವದು.[3]

**ಶಬ್ದಶಕ್ತೇರಚಿನ್ತ್ಯತ್ವಾಚ್ಛಬ್ದಾದೇವಾಽಪರೋಕ್ಷಧೀಃ ।**
**ಪ್ರಸುಪ್ತಃ ಪುರುಷೋ ಯದ್ವಚ್ಛಬ್ದೇನೈವಾವಬುಧ್ಯತೇ ॥೧೯॥**

೧೯. ಶಬ್ದಶಕ್ತಿಯು ಅಚಿಂತ್ಯವಾಗಿರುವದರಿಂದ[4] ಶಬ್ದದಿಂದಲೇ ಅಪರೋಕ್ಷಜ್ಞಾನವಾಗುವದು. ಗಾಢನಿದ್ರೆಯಲ್ಲಿರುವ ಪುರುಷನು ಶಬ್ದದಿಂದಲೇ ಎಚ್ಚರುತ್ತಾನಲ್ಲ, ಹಾಗೆಯೇ ಇದು.[5]

---

1. ಏಷಣಾತ್ರಯವನ್ನು ತ್ಯಾಗಮಾಡುವದೇ ಅಭಯದಾನವು.

2. ಇಲ್ಲಿ ಯೋಗವೆಂದರೆ ನಿದಿಧ್ಯಾಸನವು, ತನ್ನೊಳಗೇ ಆತ್ಮಸ್ವರೂಪವನ್ನು ಅನುಭವಕ್ಕೆ ತಂದುಕೊಳ್ಳುವ ಪ್ರಯತ್ನವು.

3. ಶ್ರವಣಮನನನಿದಿಧ್ಯಾಸನಗಳು ದರ್ಶನಕ್ಕೆ ಕಾರಣವೆಂದು ಬೃ.೨—೪—೫ರಲ್ಲಿ ಹೇಳಿದೆ.

4. ಶಬ್ದವು ಹೇಗೆ ಜ್ಞಾನವನ್ನುಂಟುಮಾಡುವದೆಂಬುದು ತರ್ಕಾತೀತವಾಗಿರುವದರಿಂದ ಎಂದರ್ಥ.

5. ನಿದ್ರೆಯಲ್ಲಿರುವವನಿಗೆ ಶ್ರೋತ್ರೇಂದ್ರಿಯಸಂಬಂಧವಿಲ್ಲದಿದ್ದರೂ ತನ್ನ ಹೆಸರನ್ನು ಕೂಗಿದರೆ ಎಚ್ಚರುವಂತೆ ಅಜ್ಞನಿಗೂ ಶ್ರುತಿವಾಕ್ಯಶ್ರವಣದಿಂದ ತಾನು ಬ್ರಹ್ಮವೆಂಬ ಜ್ಞಾನವಾಗುವದೆಂದು ಭಾವ. ಬೃ. ವಾ. ೪—೪—೫—೬೯೭, ೬೯೮ ಇವನ್ನು ನೋಡಿ ; ಎರಡನೆಯ ಶ್ಲೋಕವು ಹೀಗಿದೆ : 'ಶಬ್ದಶಕ್ತೇರಚಿನ್ತ್ಯತ್ವಾದಾತ್ಮತ್ವಾದ್ಬೋಧರೂಪಿಣಃ । ತತ್ಸಾಕ್ಷ್ಯತ್ವಾಚ್ಚ ನಿದ್ರಾಯಾ ವಿದ್ಮಸ್ತಂ ಮೋಹಹಾನತಃ ॥' ಶಬ್ದಶಕ್ತಿಯು ಅಚಿಂತ್ಯವಾಗಿರುವದರಿಂದಲೂ ಚೈತನ್ಯವು ನಮ್ಮ ಆತ್ಮನೇ ಆಗಿರುವದರಿಂದಲೂ ನಿದ್ರೆಯು ಅದಕ್ಕೆ ಸಾಕ್ಷ್ಯವಾಗಿರುವದರಿಂದಲೂ ಅಜ್ಞಾನವನ್ನು ನಾಶಮಾಡಿಕೊಂಡು ಆ ಪರಮಾತ್ಮನನ್ನು ಅರಿತುಕೊಳ್ಳುತ್ತೇವೆ.

## ಸದ್ಗುರುವಿನ ಬೋಧೆಯಿಂದ ತತ್ತ್ವಜ್ಞಾನ

**ಆತ್ಮಾನಾತ್ಮವಿವೇಕೇನ ಜ್ಞಾನಂ ಭವತಿ ನಿಶ್ಚಲಮ್ ।**
**ಗುರುಣಾ ಬೋಧಿತಃ ಶಿಷ್ಯಃ ಶಬ್ದಬ್ರಹ್ಮಾತಿವರ್ತತೇ ॥೨೦॥**

೨೦. ಆತ್ಮಾನಾತ್ಮಗಳ ವಿವೇಕದಿಂದ ಜ್ಞಾನವು ನಿಶ್ಚಲವಾಗುತ್ತದೆ.[1] ಗುರುವು ಬೋಧಿಸಲಾಗಿ ಶಿಷ್ಯನು ಶಬ್ದಬ್ರಹ್ಮವನ್ನು ಮೀರುವನು.[2]

**ನ ತ್ವಂ ದೇಹೋ ನೇನ್ದ್ರಿಯಾಣಿ ನ ಪ್ರಾಣೋ ನ ಮನೋ ನ ಧೀಃ ।**
**ವಿಕಾರಿತ್ವಾದ್ವಿನಾಶಿತ್ವಾದ್ದೃಶ್ಯತ್ವಾಚ್ಚ ಘಟೋ ಯಥಾ ॥೨೧॥**

೨೧. "ನೀನು ದೇಹವಲ್ಲ, ಇಂದ್ರಿಯಗಳಲ್ಲ, ಪ್ರಾಣವಲ್ಲ, ಮನಸ್ಸಲ್ಲ, ಬುದ್ಧಿಯಲ್ಲ. ಏಕೆಂದರೆ (ಅವುಗಳು)[3] ಗಡಿಗೆಯಂತೆ ವಿಕಾರಿಗಳು, ವಿನಾಶವಾಗತಕ್ಕವು, ದೃಶ್ಯವಾಗಿವೆ.[4]

**ವಿಶುದ್ಧಂ ಕೇವಲಂ ಜ್ಞಾನಂ ನಿರ್ವಿಶೇಷಂ ನಿರಞ್ಜನಮ್ ।**
**ಯದೇಕಂ ಪರಮಾನನ್ದಂ ತತ್ತ್ವಮಸ್ಯದ್ವಯಂ ಪರಮ್ ॥೨೨॥**

೨೨. ಅತ್ಯಂತಶುದ್ಧವೂ ಅದ್ವಿತೀಯವೂ ಆಗಿರುವ, ಯಾವ ವಿಶೇಷಗಳೂ ಇಲ್ಲದ, ಮತ್ತೊಂದರ ಅಂಟೂ ಇಲ್ಲದ, ಪರಮಾನಂದೈಕಸ್ವಭಾವವಾದ ಜ್ಞಾನವಿದೆಯಲ್ಲ, ಆ ಅದ್ವಯವಾದ[5] ಪರತತ್ತ್ವವೇ ನೀನು.

---

1.ಅನಾತ್ಮಗಳಲ್ಲಿ ನಾನೆಂಬ ಬುದ್ಧಿಯುಂಟಾಗುವ ಚಾಂಚಲ್ಯವನ್ನು ಕಳೆದುಕೊಳ್ಳುತ್ತದೆ.

2.ಶಬ್ದಬ್ರಹ್ಮವೆಂದರೆ ಬರಿಯ ವೇದವಾಕ್ಯ, ಅದನ್ನು ಮೀರುವದೆಂದರೆ ಬ್ರಹ್ಮವನ್ನು ಅನುಭವಕ್ಕೆ ಅಳವಡಿಸಿಕೊಳ್ಳುವದು.

3.ಇಲ್ಲಿ 'ತೇಷಾಮ್' ಎಂಬ ಮಾತೊಂದು ಇರಬೇಕು ; ಇಲ್ಲದಿದ್ದರೆ ಪಂಚಮೀವಿಭಕ್ತಿಯ ಶಬ್ದಗಳೆಲ್ಲ ತ್ವಂ (ನೀನು) ಎಂಬುದಕ್ಕೇ ಅನ್ವಯಿಸಿ, 'ನೀನು ವಿಕಾರಿ* ಎಂದು ಮುಂತಾಗಿ ಅಪಾರ್ಥವಾಗುತ್ತದೆ.

4.ಈ ವಾಕ್ಯದಲ್ಲಿ ಆತ್ಮಾನಾತ್ಮವಿವೇಕವನ್ನು ಅನುವಾದಮಾಡಿಕೊಂಡಿದೆ, ಮುಂದಿನ ಶ್ಲೋಕದಲ್ಲಿಯೇ ಗುರುವಿನ ಪ್ರತಿಪಾದನೆಯಿದೆ ಎನ್ನಬೇಕು.

5.ಈ ಶ್ಲೋಕದಲ್ಲಿ ಕೇವಲಂ, ಏಕಂ, ಅದ್ವಯಂ-- ಎಂಬ ಮೂರು ಮಾತುಗಳಿಗೂ ಒಂದೇ ಅರ್ಥವಿದೆ. ಆದ್ದರಿಂದ ಸಜಾತೀಯ, ವಿಜಾತೀಯ, ಸ್ವಗತ– ಎಂಬ ಮೂರು ಭೇದವನ್ನು ಅಲ್ಲಗಳೆಯುವದಕ್ಕೆ ಹೀಗೆ ಮೂರು ಶಬ್ದಗಳನ್ನು ಉಪಯೋಗಿಸಿದೆ ಎಂದು ಸಾರ್ಥಕ್ಯವನ್ನು ಕಲ್ಪಿಸಬೇಕಾಗಿದೆ.

**ಶಬ್ದಸ್ಯಾದ್ಯನ್ತಯೋಃ ಸಿದ್ಧಂ ಮನಸೋಽಪಿ ತಥೈವ ಚ ।**
**ಮಧ್ಯೇ ಸಾಕ್ಷಿತಯಾ ನಿತ್ಯಂ ತದೇವ ತ್ವಂ ಭ್ರಮಂ ಜಹಿ ॥೨೩॥**

೨೩. ಶಬ್ದದ ಮೊದಲು ಕೊನೆಗಳಲ್ಲಿಯೂ ಮತ್ತು ಹೀಗೆಯೇ ಮನಸ್ಸಿನ (ಮೊದಲುಕೊನೆಗಳಲ್ಲಿಯೂ) ಸಿದ್ಧವಾಗಿ, ನಡುವೆ ಸಾಕ್ಷಿಯಾಗಿ ನಿತ್ಯವಾಗಿರುವದಲ್ಲ, ಅದೇ ನೀನು ; ಭ್ರಾಂತಿಯನ್ನು ಬಿಡು[1] !

**ಸ್ಥೂಲವೈರಾಜಯೋರೈಕ್ಯಂ ಸೂಕ್ಷ್ಮಹೈರಣ್ಯಗರ್ಭಯೋಃ ।**
**ಅಜ್ಞಾನಮಾಯಯೋರೈಕ್ಯಂ ಪ್ರತ್ಯಗ್ವಿಜ್ಞಾನಪೂರ್ಣಯೋಃ ॥೨೪॥**

೨೪. ಸ್ಥೂಲಕ್ಕೂ ವೈರಾಜಕ್ಕೂ ಐಕ್ಯವು, ಸೂಕ್ಷ್ಮಕ್ಕೂ ಹೈರಣ್ಯಗರ್ಭಕ್ಕೂ ಐಕ್ಯವು, ಅಜ್ಞಾನಕ್ಕೂ ಮಾಯೆಗೂ ಐಕ್ಯವು, ಪ್ರತ್ಯಗ್ವಿಜ್ಞಾನಕ್ಕೂ ಪೂರ್ಣಕ್ಕೂ ಐಕ್ಯವು[2].

**ಚಿನ್ಮಾತ್ರೈಕರಸೇ ವಿಷ್ಣೌ ಬ್ರಹ್ಮಾತ್ಮೈಕ್ಯಸ್ವರೂಪಕೇ ।**
**ಭ್ರಮೇಣೈವ ಜಗಜ್ಜಾತಂ ರಜ್ಜ್ವಾಂ ಸರ್ಪಭ್ರಮೋ ಯಥಾ ॥೨೫॥**

೨೫. ಚಿನ್ಮಾತ್ರವೆಂಬ •ಏಕರಸವಾಗಿರುವ[3] ಬ್ರಹ್ಮಾತ್ಮೈಕ್ಯಸ್ವರೂಪನಾದ ವಿಷ್ಣುವಿನಲ್ಲಿ – ಹಗ್ಗದಲ್ಲಿ ಹಾವಿನ ಭ್ರಾಂತಿಯಾಗುವಂತೆ– ಭ್ರಮೆಯಿಂದಲೇ ಜಗತ್ತು ಉಂಟಾಗಿರುತ್ತದೆ.

## ವೇದಾಂತದರ್ಶನದ ಹೆಚ್ಚುಗಾರಿಕೆ

**ತಾರ್ಕಿಕಾಣಾಂ ತು ಜೀವೇಶೌ ವಾಚ್ಯಾವೇತೌ ವಿದುರ್ಬುಧಾಃ ।**
**ಲಕ್ಷ್ಯೌ ಚ ಸಾಂಖ್ಯಯೋಗಾಭ್ಯಾಂ (?) ವೇದಾನ್ತೈರೈಕ್ಯತಾ ತಯೋಃ ॥೨೬॥**

೨೬. ತಾರ್ಕಿಕರ ಜೀವೇಶ್ವರರು ವಾಚ್ಯಾರ್ಥಗಳೆಂದು ಬಲ್ಲವರು ತಿಳಿಯುತ್ತಾರೆ, ಸಾಂಖ್ಯಯೋಗಗಳಿಂದ (?) ಲಕ್ಷ್ಯಾರ್ಥಗಳು (ಎಂದು

1. ಶಬ್ದವು ವಸ್ತುವನ್ನು ತಿಳಿಸುವ ಮುಂಚೆಯೂ ತಿಳಿಸಿದಮೇಲೂ ಆತ್ಮಚೈತನ್ಯವು ಇರುತ್ತದೆ ; 'ಶಬ್ದದಿಂದ ವಸ್ತುವನ್ನು ತಿಳಿದೆನು' ಎಂಬ ಜ್ಞಾನವು ಆ ಚೈತನ್ಯದ ಬಲದಿಂದಲೇ ಆಗುತ್ತದೆ. ಹೀಗೆಯೇ ಘಟಪ್ರತ್ಯಯದಿಂದ ಘಟವನ್ನು ಅರಿತೆನು ಎಂಬ ಜ್ಞಾನಕ್ಕೂ ಆ ಚೈತನ್ಯವೇ ಆಧಾರ. ಶಬ್ದಪ್ರತ್ಯಯಗಳು ವ್ಯಾಪಾರಮಾಡುವಾಗಲೂ ಚೈತನ್ಯವು ಅವಕ್ಕೆ ಸಾಕ್ಷಿಯಾಗಿರುತ್ತದೆ. ಅದೇ ನಮ್ಮಗಳ ಪರಮಾರ್ಥಸ್ವರೂಪವು.

2. ಮೊದಲನೆಯ ಮೂರೂ ವ್ಯಷ್ಟಿಸಮಷ್ಟಿಗಳಾಗಿರುವ ಉಪಾಧಿಗಳಿಗೆ ಐಕ್ಯವನ್ನು ಹೇಳುವಂತೆ ತೋರುತ್ತದೆ. ಈ ಬಗೆಯ ಪ್ರತಿಪಾದನೆಯು ಭಾಷ್ಯದಲ್ಲಿ ಕಾಣಲಿಲ್ಲ.

3. ಚಿನ್ಮಾತ್ರವಲ್ಲದೆ ಮತ್ತೇತರ ಬೆರಕೆಯೂ ಇಲ್ಲದ ಎಂದರ್ಥ ; ಚಿನ್ಮಾತ್ರವೆಂಬಷ್ಟರಿಂದಲೇ ಈ ಅರ್ಥವು ಹೊರಡುತ್ತದೆ.

ತಿಳಿಯುತ್ತಾರೆ). ಅವರಿಬ್ಬರಿಗೂ ವೇದಾಂತಗಳಿಂದ (?) ಐಕ್ಯ(ವೆಂದು ತಿಳಿಯುತ್ತದೆ).[1]

ಕಾರ್ಯಕಾರಣವಾಚ್ಯಾಂಶೌ ಜೀವೇಶೌ ಯೌ ಜಹಚ್ಚ ತೌ ।
ಅಜಹಚ್ಚ ತಯೋರ್ಲಕ್ಷ್ಯೌ ಚಿದಂಶಾವೇಕರೂಪಿಣೌ ॥ ೨೭ ॥

೨೭. ಕಾರ್ಯಕಾರಣೋಪಾಧಿಗಳೆಂಬ ವಾಚ್ಯಾಂಶಗಳುಳ್ಳ ಜೀವೇಶ್ವರರಿದಾರಲ್ಲ ಅವರನ್ನು ಬಿಟ್ಟು, ಅವುಗಳ (?) ಲಕ್ಷ್ಯಗಳನ್ನು ಬಿಡದೆ, ಚಿದಂಶಗಳೆರಡನ್ನೂ ಏಕರೂಪವೆಂದು ವೇದಾಂತಗಳಲ್ಲಿ ಹೇಳಿರುತ್ತದೆ.[2]

ಕರ್ಮಶಾಸ್ತ್ರೇ ಕುತೋ ಜ್ಞಾನಂ ತರ್ಕೇ ನೈವಾಽಸ್ತಿ ನಿಶ್ಚಯಃ ।
ಸಾಂಖ್ಯಯೋಗೌ ಭಿದಾಪನ್ನೌ ಶಾಬ್ದಿಕಾಃ ಶಬ್ದತತ್ಪರಾಃ ॥೨೮॥

ಅನ್ಯೇ ಪಾಷಣ್ಡಿನಃ ಸರ್ವೇ ಜ್ಞಾನವಾರ್ತಾ ಸುದುರ್ಲಭಾ[3] ।
ಏಕಂ ವೇದಾನ್ತವಿಜ್ಞಾನಂ ಸ್ವಾನುಭೂತ್ಯಾ ವಿರಾಜತೇ ॥೨೯॥

೨೮–೨೯. ಕರ್ಮಶಾಸ್ತ್ರವಾದ ಮೀಮಾಂಸದಲ್ಲಿ ಜ್ಞಾನವೆಲ್ಲಿಯದು ? ತರ್ಕದಲ್ಲಿ ನಿಶ್ಚಯವೇ ಇಲ್ಲ, ಸಾಂಖ್ಯಯೋಗಗಳು ಭೇದವಾದವನ್ನು ಹೊಂದಿರುತ್ತವೆ, ವೈಯಾಕರಣರು ಶಬ್ದಮಾತ್ರದಲ್ಲಿ ತಾತ್ಪರ್ಯವುಳ್ಳವರಾಗಿರುತ್ತಾರೆ, ಮಿಕ್ಕವರೆಲ್ಲರೂ ಪಾಷಂಡಿಗಳು; (ಹೀಗಿರುವದರಿಂದ) ಜ್ಞಾನವಾರ್ತೆಯು ದೊರಕುವದು ಕಷ್ಟವಾಗಿಬಿಟ್ಟಿದೆ. ವೇದಾಂತಶಾಸ್ತ್ರವೊಂದೇ ಆತ್ಮಾನುಭವದಿಂದ ಒಪ್ಪುತ್ತಿರುವದು.

---

1.ಈ ಶ್ಲೋಕದಲ್ಲಿ ಪಾಠವು ಸರಿಯಾಗಿಲ್ಲ, ತತ್ತ್ವಂಪದಗಳಿಗೆ ವಾಚ್ಯಾರ್ಥವನ್ನು ಹಿಡಿದರೆ ತಾರ್ಕಿಕರು ಒಪ್ಪುವ ಜೀವೇಶ್ವರಭೇದವೂ ಲಕ್ಷ್ಯಾರ್ಥವನ್ನು ಹಿಡಿದರೆ ಸಾಂಖ್ಯರ ಮತ್ತು ಯೋಗಿಗಳ ಪುರುಷ, ಈಶ್ವರ – ಇವರೂ ಸಿದ್ಧವಾಗುತ್ತಾರೆ ; ತತ್ತ್ವಮಸಿವಾಕ್ಯದ ಅರ್ಥವು ಲಕ್ಷ್ಯಾರ್ಥಗಳ ಐಕ್ಯವು – ಎಂಬುದು ಶ್ಲೋಕಾರ್ಥವಿರಬಹುದು.

2.ಈ ಶ್ಲೋಕದ ಪದಗಳು ಅನನ್ವಿತವಾಗಿವೆ. ಜೀವನಿಗೆ ಕಾರ್ಯೋಪಾಧಿ, ಈಶ್ವರನಿಗೆ ಕಾರಣೋಪಾಧಿ ; ಈ ಉಪಾಧಿವಿಶಿಷ್ಟರಾದಾಗ ತ್ವಂ ಮತ್ತು ತತ್ – ಎಂಬ ಪದಗಳಿಗೆ ಜೀವೇಶ್ವರರು ವಾಚ್ಯರು. ಅವುಗಳ ಲಕ್ಷ್ಯಾರ್ಥವನ್ನು ಮಾತ್ರ ನೋಡಿದರೆ ಅವು ಚಿನ್ಮಾತ್ರವನ್ನು ಹೇಳುವವು ಎಂಬುದು ವಾಕ್ಯದ ತಾತ್ಪರ್ಯವೆಂದು ಕಾಣುತ್ತದೆ.

3.'ಜ್ಞಾನವಾರ್ತಾಸು ದುರ್ಲಭಾಃ' ಎಂಬ ಪಾಠಕ್ಕೆ ಜ್ಞಾನದ ಸುದ್ದಿಯೇ ದೊರಕದೆ ಇರುವವರು – ಎಂದರ್ಥ. ಈಗ ಇರುವಂತೆ ವಿಸರ್ಗರಹಿತಪಾಠವೇ ಸಾಕೆಂದು ತೋರುತ್ತದೆ.

## ತತ್ತ್ವಜ್ಞಾನದ ಸ್ವರೂಪ

**ಅಹಂ ಮಮೇತ್ಯಯಂ ಬನ್ಧೋ ಮಮಾಹಂ ನೇತಿ ಮುಕ್ತತಾ ।**
**ಬನ್ಧಮೋಕ್ಷೌ ಗುಣೈರ್ಭಾತೋ[1] ಗುಣಾಃ ಪ್ರಕೃತಿಸಂಭವಾಃ ॥೩೦॥**

೩೦. ನಾನು, ನನ್ನದು– ಎಂಬಿದೇ ಬಂಧವು ; ನನ್ನದು, ನಾನು ಎಂಬುದಿಲ್ಲವೆಂಬುದೇ ಮೋಕ್ಷವು ; ಬಂಧಮೋಕ್ಷಗಳು ಗುಣಗಳಿಂದ ತೋರುತ್ತಿರುವವು, ಗುಣಗಳು ಪ್ರಕೃತಿಯಿಂದ ಉಂಟಾಗಿರುವವು.[2]

**ಜ್ಞಾನಮೇಕಂ ಸದಾ ಭಾತಿ ಸರ್ವಾವಸ್ಥಾಸು ನಿರ್ಮಲಮ್ ।**
**ಮನ್ದಭಾಗ್ಯಾ ನ ಜಾನನ್ತಿ ಸ್ವರೂಪಂ ಕೇವಲಂ ಬೃಹತ್ ॥ ೩೧ ॥**

೩೧. ಎಲ್ಲಾ ಅವಸ್ಥೆಗಳಲ್ಲಿ ಯಾವಾಗಲೂ ನಿರ್ಮಲಜ್ಞಾನವೊಂದೇ ನಿತ್ಯವಾಗಿ ತೋರುತ್ತಿರುವದು.[3] ಆದರೆ ಅಲ್ಪಭಾಗ್ಯರಾದವರು ತಮ್ಮ ಸ್ವರೂಪವಾಗಿ ಆ ಅದ್ವಿತೀಯಬ್ರಹ್ಮವನ್ನು ಅರಿತುಕೊಳ್ಳಲಾರದೆ ಇರುವರು.

**ಸಂಕಲ್ಪಸಾಕ್ಷಿ ಯಜ್ಜ್ಞಾನಂ ಸರ್ವಲೋಕೈಕಜೀವನಮ್ ।**
**ತದೇವಾಽಸ್ಮೀತಿ ಯೋ ವೇದ ಸ ಮುಕ್ತೋ ನಾಽತ್ರ ಸಂಶಯಃ ॥೩೨॥**

೩೨. ಯಾವ ಜ್ಞಾನವು ಸಂಕಲ್ಪಗಳಿಗೆ ಸಾಕ್ಷಿಯಾಗಿ ಸರ್ವಜನರಿಗೂ ಜೀವನಹೇತುವಾಗಿರುವದೋ ಅದೇ ನಾನಾಗಿರುವೆನು ಎಂದು ಯಾವನು ಅರಿತುಕೊಂಡಿರುವನೋ ಅವನು ಮುಕ್ತನು, ಇದರಲ್ಲಿ ಸಂಶಯವಿಲ್ಲ.

**ಪ್ರಮಾತಾ ಚ ಪ್ರಮಾಣಂ ಚ ಪ್ರಮೇಯಂ ಪ್ರಮಿತಿಸ್ತಥಾ ।**
**ಯಸ್ಯ ಭಾಸಾಽವಭಾಸನ್ತೇ ಮಾನಂ ಜ್ಞಾನಾಯ ತಸ್ಯ ಕಿಮ್ ॥೩೩॥**

೩೩. ಪ್ರಮಾತೃವೂ ಪ್ರಮಾಣವೂ ಪ್ರಮೇಯವೂ ಮತ್ತು ಪ್ರಮಿತಿಯೂ ಯಾವ ಆತ್ಮನ ಬೆಳಕಿನಿಂದ ತೋರಿಕೊಳ್ಳುತ್ತಿರುವವೋ ಆ ಆತ್ಮನ

---

1. 'ಭಾತಿ' ಎಂಬ ಪಾಠವು ಸರಿಯಲ್ಲ.

2. ಸತ್ತ್ವರಜಸ್ತಮೋಗುಣಗಳ ಕಾರ್ಯಗಳು ಪ್ರಕೃತಿಯಿಂದಾಗಿರುತ್ತವೆ ಎಂದರ್ಥವಿರಬಹುದು.

3. 'ಏಕಂ ಸತ್ ಆಭಾತಿ' ತಾನೊಂದೇ ಅವ್ಯಭಿಚರಿತವಾಗಿ ತೋರುತ್ತಿರುವದು ಎಂದೂ ಪಾಠವನ್ನು ಕಲ್ಪಿಸಬಹುದು.

ಜ್ಞಾನಕ್ಕೆ ಪ್ರಮಾಣವು ಯಾವದು (ಬೇಕು ?[1])

**ಅರ್ಥಾಕಾರಾ ಭವೇದ್ವೃತ್ತಿಃ ಫಲೇನಾರ್ಥಃ ಪ್ರಕಾಶತೇ ।**
**ಅರ್ಥಜ್ಞಾನಂ ವಿಜಾನಾತಿ ಸ ಏವಾರ್ಥಃ ಪ್ರಕಾಶತೇ ॥೩೪॥**

೩೪. ಅರ್ಥದ ಆಕಾರದಲ್ಲಿ ವೃತ್ತಿಯು ಉಂಟಾಗುತ್ತಿರುವದು, ಫಲದಿಂದ ಅರ್ಥವು ಪ್ರಕಾಶಿಸುತ್ತಿರುವದು.[2] ಅರ್ಥಜ್ಞಾನವನ್ನು ಅರಿಯುತ್ತದೆ ಯಲ್ಲ, ಆ ಅರ್ಥವು ತಾನೇ ಬೆಳಗುತ್ತದೆ.[3]

**ವೃತ್ತಿವ್ಯಾಪ್ಯತ್ವಮೇವಾಽಸ್ತು ಫಲವ್ಯಾಪ್ತಿಃ ಕಥಂ ಭವೇತ್ ।**
**ಸ್ವಪ್ರಕಾಶಸ್ವರೂಪತ್ವಾತ್ ಸಿದ್ಧತ್ವಾಚ್ಚ ಚಿದಾತ್ಮನಃ ॥೩೫॥**

೩೫. ಆತ್ಮನಿಗೆ ವೃತ್ತಿವ್ಯಾಪ್ಯತ್ವವೊಂದೇ ಆಗಬಹುದು, ಆದರೆ ಚಿದಾತ್ಮನು ಸ್ವಪ್ರಕಾಶರೂಪನಾಗಿರುವದರಿಂದಲೂ ಸ್ವಯಂಸಿದ್ಧನಾಗಿಯೇ ಇರುವದರಿಂದಲೂ ಫಲವ್ಯಾಪ್ಯತ್ವವು ಹೇಗಾದೀತು [4] ?

**ಚಿತ್ತಂ ಚೈತನ್ಯಮಾತ್ರೇಣ ಸಂಯೋಗಾಚ್ಚೇತನಾ ಭವೇತ್ ।**
**ಅರ್ಥಾದರ್ಥಾನ್ತರೇ ವೃತ್ತಿರ್ಗನ್ತುಂ ಚಲತಿ ಚಾನ್ತರೇ ॥೩೬॥**

**ನಿರಾಧಾರಾ ನಿರ್ವಿಕಾರಾ ಯಾ ದಶಾ ಸೋನ್ಮನೀ ಸ್ಮೃತಾ ।**

೩೬–೩೬೨. ಚಿತ್ತವು ಚೈತನ್ಯಮಾತ್ರದೊಡನೆ ಸಂಯುಕ್ತವಾಗುವದರಿಂದ 'ಚೇತನಾ' ಎನಿಸುವದು. ಚಿತ್ತವೃತ್ತಿಯು ಒಂದು ಅರ್ಥದಿಂದ ಮತ್ತೊಂದು ಅರ್ಥವನ್ನು ಸೇರುವದಕ್ಕೆ ಚಲಿಸುತ್ತಿರುವಲ್ಲಿ ನಡುವೆ ನಿರಾಧಾರವಾಗಿ ನಿರ್ವಿಕಾರವಾಗಿ ಯಾವ ದಶೆಯಿರುವದೋ ಅದೇ 'ಉನ್ಮನೀ' ಎನಿಸುವದು.[5]

1.ಪ್ರಮಾತಾ ಚ ಪ್ರಮಾಣಂ ಚ ಪ್ರಮೇಯೋ ನಿಶ್ಚಿತಿಸ್ತಥಾ । ಯತ್ಸಾಂನಿಧ್ಯಾತ್ ಪ್ರಸಿಧ್ಯನ್ತಿ ತತ್ಸಿದ್ಧೌ ಕಿಮುಪೇಕ್ಷ್ಯತೇ ॥ ಬೃ. ವಾ. ೧–೪–೮೭೦. ಈ ವಾರ್ತಿಕದ ಅಭಿಪ್ರಾಯವು ಇಲ್ಲಿದೆ.

2.ಇಲ್ಲಿ 'ಫಲ'ವೆಂದರೆ ಅಂತಃಕರಣದಲ್ಲಿ ಚಿದಾಭಾಸವೆಂಬರ್ಥವಿದೆ ; ಆದರೆ ಉಪದೇಶಸಾಹಸ್ರಿ ಗದ್ಯ ೨–೬೧ರಲ್ಲಿ ಫಲವೆಂದರೆ ಪ್ರಮಿತಿರೂಪವಾದ ಚೈತನ್ಯವೆಂದೇ ಬರೆದಿರುವದನ್ನು ನೋಡಿ.

3.ಅರ್ಥವನ್ನರಿಯುವ ಜ್ಞಾನಕ್ಕೂ ಸಾಕ್ಷಿಯಾಗಿರುವ ಚೈತನ್ಯರೂಪವಾದ ಅರ್ಥವು ಸ್ವಯಂಪ್ರಕಾಶವಾಗಿದೆ, ಅದನ್ನು ಬೆಳಗುವದಕ್ಕೆ ಮತ್ತೇನೂ ಬೇಡ – ಎಂದರ್ಥ.

4.ಈ ವರ್ಣನೆಯು ಪಂಚದಶಿಯೇ ಮುಂತಾದ ಈಚಿನ ಗ್ರಂಥಗಳಲ್ಲಿದೆಯಾದರೂ ಭಾಷ್ಯದಲ್ಲಿ ಕಾಣುವದಿಲ್ಲ; ಆತ್ಮನಿಗೆ ವೃತ್ತಿವ್ಯಾಪ್ಯತ್ವವನ್ನು ಅಲ್ಲಿ ಒಪ್ಪಿರುವದಿಲ್ಲ.

5.'ಉನ್ಮನೀ' ಎಂಬ ಮಾತು ಭಾಷ್ಯದಲ್ಲಿ ಎಲ್ಲಿಯೂ ಇಲ್ಲ. ಇಲ್ಲಿ ಸಾಕ್ಷಿರೂಪನಾದ ಆತ್ಮನನ್ನೇ ಉನ್ಮನೀ ಎಂದು ಕರೆದಿರುತ್ತದೆ ಎಂಬುದನ್ನು ಲಕ್ಷಿಸಬೇಕು.

ಚಿತ್ತಂ ಚಿದಿತಿ ಜಾನೀಯಾತ್ತಕಾರರಹಿತಂ ಯದಾ ॥೩೭॥

ತಕಾರೋ ವಿಷಯಾಧ್ಯಾಸೋ ಜಪಾರಾಗೋ ಯಥಾ ಮಣೌ ।
ಜ್ಞೇಯವಸ್ತುಪರಿತ್ಯಾಗಾಜ್ಞಾನಂ ತಿಷ್ಠತಿ ಕೇವಲಮ್ ॥೩೮॥

ತ್ರಿಪುಟೀ ಕ್ಷೀಣತಾಮೇತಿ ಬ್ರಹ್ಮನಿರ್ವಾಣಮೃಚ್ಛತಿ ।
ಮನೋಮಾತ್ರಮಿದಂ ಸರ್ವಂ ತನ್ಮನೋ ಜ್ಞಾನಮಾತ್ರಕಮ್ ॥೩೯॥

೩೭–೩೯. ಚಿತ್ತವು ಯಾವಾಗ ತಕಾರರಹಿತವಾಗುತ್ತದೆಯೋ ಆಗ ಅದು ಚಿತ್ತೆಂದೇ ತಿಳಿಯಬೇಕು. (ಇಲ್ಲಿ) ತಕಾರವೆಂಬುದು ಸ್ಫಟಿಕಮಣಿಯಲ್ಲಿ ದಾಸಿವಾಳಹೂವಿನ ಕೆಂಪಿನಂತೆ ವಿಷಯದ ಅಧ್ಯಾಸಮಾತ್ರವಾಗಿರುತ್ತದೆ. ಜ್ಞೇಯವಸ್ತುವನ್ನು ಬಿಟ್ಟರೆ[1] ಬರಿಯ ಜ್ಞಾನವೇ ನಿಲ್ಲುತ್ತದೆ, ತ್ರಿಪುಟಿಯು ಕ್ಷಯವಾಗುತ್ತದೆ.[2] (ಆಗ) ಬ್ರಹ್ಮನಿರ್ವಾಣವನ್ನು ಹೊಂದುತ್ತಾನೆ. ಇದೆಲ್ಲವೂ ಮನೋಮಾತ್ರವಾಗಿರುತ್ತದೆ[3], ಆ ಮನಸ್ಸು ಜ್ಞಾನಮಾತ್ರವಾಗಿರುತ್ತದೆ.[4]

## ಅಜ್ಞಾನವೂ ವಿಜ್ಞಾನವೂ

ಅಜ್ಞಾನಂ ಭ್ರಮ ಇತ್ಯಾಹುರ್ವಿಜ್ಞಾನಂ ಪರಮಂ ಪದಮ್ ।
ಅಜ್ಞಾನಂ ಚಾನ್ಯಥಾಜ್ಞಾನಂ ಮಾಯಾಮೇತಾಂ ವದನ್ತಿ ತೇ ॥೪೦॥

೪೦. ಅಜ್ಞಾನವನ್ನು ಭ್ರಮೆಯೆನ್ನುವರು, ವಿಜ್ಞಾನವೇ ಪರಮಪದವು. ಅಜ್ಞಾನವು ಅನ್ಯಥಾಜ್ಞಾನವೇ, ಇದನ್ನೇ (ಬಲ್ಲವರು) ಮಾಯೆಯೆನ್ನುತ್ತಾರೆ.

ಈಶ್ವರಂ ಮಾಯಿನಂ ವಿದ್ಯಾನ್ಮಾಯಾತೀತಂ ನಿರಞ್ಜನಮ್ ।
ಸದಾನನ್ದೇ ಚಿದಾಕಾಶೇ ಮಾಯಾಮೇಘಸ್ತಟಿನ್ಮನಃ ॥೪೧॥

ಅಹಂತಾ ಗರ್ಜನಂ ತತ್ರ ಧಾರಾಸಾರಾ ಹಿ ವೃತ್ತಯಃ ।
ಮಹಾಮೋಹಾನ್ಧಕಾರೇಽಸ್ಮಿನ್ ದೇವೋ ವರ್ಷತಿ ಲೀಲಯಾ ॥೪೨॥

1. ಅಧ್ಯಾಸವನ್ನು ಮಾಡಿಕೊಳ್ಳದೆ ಇದ್ದರೆ ಎಂದರ್ಥ.

2. ಜ್ಞಾತೃ, ಜ್ಞಾನ, ಜ್ಞೇಯ – ಎಂಬ ವಿಭಾಗವಿರುವದಿಲ್ಲ, ಶುದ್ಧಜ್ಞಾನವೊಂದೇ ಉಳಿದುಕೊಳ್ಳುತ್ತದೆ ಎಂದರ್ಥ. 3. ಮನಃಕಲ್ಪಿತವಾಗಿರುತ್ತದೆ.

4. ಸರಿಯಾಗಿ ನೋಡಿದರೆ ಮನಸ್ಸೇ ಆತ್ಮಚೈತನ್ಯದಲ್ಲಿ ಕಲ್ಪಿತವಾಗಿರುತ್ತದೆ.

೪೧–೪೨. ಈಶ್ವರನು ಮಾಯಾತೀತನೂ ನಿರಂಜನನೂ ಆದ ಮಾಯಿ ಎಂದು ತಿಳಿಯಬೇಕು. ಸದಾನಂದರೂಪವಾದ ಚಿದಾಕಾಶದಲ್ಲಿ ಮಾಯೆಯೇ ಮೋಡವು, ಮನಸ್ಸೇ ಮಿಂಚು. ಅಹಂತೆಯೇ ಅಲ್ಲಿ ಗುಡುಗು. ವೃತ್ತಿಗಳೇ ಧಾರಾಕಾರವಾಗಿ ಸುರಿಯುವ ಜಡಿಯು. ಈ ಮಹಾಮೋಹವೆಂಬ ಅಂಧಕಾರದಲ್ಲಿ ದೇವನು ಲೀಲೆಯಿಂದ ಮಳೆಗರೆಯುತ್ತಿರುವನು.

ತಸ್ಯಾ ವೃಷ್ಟೇರ್ವಿರಾಮಾಯ ಪ್ರಬೋಧೈಕಸಮೀರಣಃ ।
ಜ್ಞಾನಂ ದೃಗ್ದೃಶ್ಯಯೋರ್ಭಾವೋ[1] ವಿಜ್ಞಾನಂ ದೃಶ್ಯಶೂನ್ಯತಾ ॥೪೩॥

೪೩. ಆ ಮಳೆಯು ನಿಲ್ಲುವದಕ್ಕೆ ಜ್ಞಾನವೆಂಬುದೊಂದೇ ಗಾಳಿಯು (ಸಾಕು). ಜ್ಞಾನವೆಂದರೆ ದೃಗ್ದೃಶ್ಯಗಳ ಭಾವವು, ವಿಜ್ಞಾನವೆಂದರೆ ದೃಶ್ಯವಿಲ್ಲದಿರುವದು.[2]

ಏಕಮೇವಾದ್ವಯಂ ಬ್ರಹ್ಮ ನೇಹ ನಾನಾಸ್ತಿ ಕಿಂಚನ ।
ಕ್ಷೇತ್ರಕ್ಷೇತ್ರಜ್ಞಯೋರ್ಜ್ಞಾನಂ ತಜ್ಜ್ಞಾನಂ ಜ್ಞಾನಮುಚ್ಯತೇ ॥೪೪॥

ವಿಜ್ಞಾನಂ ಚೋಭಯೋರೈಕ್ಯಂ ಕ್ಷೇತ್ರಜ್ಞಪರಮಾತ್ಮನೋಃ ।
ಪರೋಕ್ಷಂ ಶಾಸ್ತ್ರಜಂ ಜ್ಞಾನಂ ವಿಜ್ಞಾನಂ ಚಾಽಽತ್ಮದರ್ಶನಮ್ ॥೪೫॥

೪೪–೪೫. ಬ್ರಹ್ಮವು ಒಂದೇ, ತನಗೆರಡನೆಯದಿಲ್ಲದ್ದು, ಅದರಲ್ಲಿ ದ್ವೈತವು ಒಂದಿಷ್ಟೂ ಇರುವದಿಲ್ಲ.[3] ಕ್ಷೇತ್ರಕ್ಷೇತ್ರಜ್ಞರ ಜ್ಞಾನವಿದೆಯಲ್ಲ, ಆ ಜ್ಞಾನವು ಸರಿಯಾದ ಜ್ಞಾನವೆನಿಸುತ್ತದೆ. ವಿಜ್ಞಾನವೆಂದರೆ ಕ್ಷೇತ್ರಜ್ಞ ಪರಮಾತ್ಮರುಗಳಿಬ್ಬರಿಗೂ ಐಕ್ಯವನ್ನರಿಯುವದು. ಶಾಸ್ತ್ರದಿಂದುಂಟಾದ ಪರೋಕ್ಷವಾದ ತಿಳಿವಳಿಕೆಯು ಜ್ಞಾನವು, ಆತ್ಮಸಾಕ್ಷಾತ್ಕಾರವು ವಿಜ್ಞಾನವು.[4]

ಆತ್ಮನೋ ಬ್ರಹ್ಮಣಃ ಸಮ್ಯಗುಪಾಧಿದ್ವಯವರ್ಜಿತಮ್ ।
ತ್ವಮರ್ಥವಿಷಯಂ ಜ್ಞಾನಂ ವಿಜ್ಞಾನಂ ತತ್ಪದಾಶ್ರಯಮ್ ॥೪೬॥

1. 'ಭಾವಂ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

2. ಮೊದಲು ಆತ್ಮನನ್ನೂ ಅನಾತ್ಮನನ್ನೂ ನೋಡುವ ಸಾಕ್ಷಿಯೆಂದು ಕಾಣಬೇಕು, ಆ ಬಳಿಕ ಅದ್ವಿತೀಯವಾದ ಚೈತನ್ಯಮಾತ್ರವೆಂದು ಅರಿತುಕೊಳ್ಳಬೇಕು. ಇದೇ ವಿಜ್ಞಾನವು.

3. ಬೃ. ೪–೪–೧೯, ಕಾ. ೨–೧–೧೦, ೧೧ ಇವುಗಳರ್ಥವಿದು.

4. ಶಾಸ್ತ್ರಜನ್ಯಜ್ಞಾನವು ಅಪರೋಕ್ಷವಾಗಿಯೇ ಆಗುವದೆಂದು ೧೯ನೆಯ ಶ್ಲೋಕದಲ್ಲಿ ಹೇಳಿದ್ದಕ್ಕೆ ಇದು ವಿರುದ್ಧವಾಗಿರುತ್ತದೆ.

ಪದಯೋರೈಕ್ಯಬೋಧಸ್ತು ಜ್ಞಾನವಿಜ್ಞಾನಸಂಜ್ಞಿತಮ್ ।
ಆತ್ಮಾನಾತ್ಮವಿವೇಕಸ್ಯ ಜ್ಞಾನಮಾಹುರ್ಮನೀಷಿಣಃ ॥೪೭॥

ಅಜ್ಞಾನಂ ಚಾನ್ಯಥಾ ಲೋಕೇ ವಿಜ್ಞಾನಂ ತನ್ಮಯಂ ಜಗತ್ ।
ಅನ್ವಯವ್ಯತಿರೇಕಾಭ್ಯಾಂ ಸರ್ವತ್ರೈಕಂ ಪ್ರಪಶ್ಯತಿ ॥೪೮॥

೪೬–೪೮. ಆತ್ಮನ ಮತ್ತು ಬ್ರಹ್ಮದ ಉಪಾಧಿದ್ವಯವರ್ಜಿತವಾದ ತ್ವಮರ್ಥವಿಷಯದ ತಿಳಿವಳಿಕೆಯು ಜ್ಞಾನವು, ತತ್ಪದಾರ್ಥದ ತಿಳಿವಳಿಕೆಯು ವಿಜ್ಞಾನವು, ಈ ಪದಗಳರ್ಥದ ಐಕ್ಯವನ್ನು ತಿಳಿದುಕೊಳ್ಳುವದು ಜ್ಞಾನವಿಜ್ಞಾನವೆಂಬ ಹೆಸರುಳ್ಳದ್ದು[1], ಆತ್ಮಾನಾತ್ಮ ವಿವೇಕವನ್ನು ಜ್ಞಾನವೆಂದು ಬಲ್ಲವರು ಕರೆಯುತ್ತಾರೆ. ತಪ್ಪುತಿಳಿವಳಿಕೆಯು ಅಜ್ಞಾನವು, ಅನ್ವಯವ್ಯತಿರೇಕಗಳಿಂದ ಜಗತ್ತು ತನ್ಮಯವೆಂದೂ ಎಲ್ಲೆಲ್ಲಿಯೂ ಅದು ಒಂದೇ ರೂಪದಿಂದ ಇರುವದೆಂದೂ ಕಾಣುವದು ವಿಜ್ಞಾನವು.

ಯತ್ತತ್ತು ವೃತ್ತಿಜಂ ಜ್ಞಾನಂ ವಿಜ್ಞಾನಂ ಜ್ಞಾನಮಾತ್ರಕಮ್ ।
ಅಜ್ಞಾನಧ್ವಂಸಕಂ ಜ್ಞಾನಂ ವಿಜ್ಞಾನಂ ಚೋಭಯಾತ್ಮಕಮ್ ॥೪೯॥

ಜ್ಞಾನವಿಜ್ಞಾನನಿಷ್ಠೇಯಂ ತತ್ಸದ್ಬ್ರಹ್ಮಣಿ ಚಾರ್ಪಣಮ್ ।

೪೯. ವೃತ್ತಿಯಿಂದಾಗುವದು ಜ್ಞಾನವು, ಬರಿಯ ಜ್ಞಾನವು ವಿಜ್ಞಾನವು, ಅಜ್ಞಾನವನ್ನು ನಾಶಗೊಳಿಸುವದು ಯಾವದೋ ಅದು ಜ್ಞಾನ, ವಿಜ್ಞಾನ– ಈ ಉಭಯರೂಪವಾಗಿರುತ್ತದೆ.[2] ಆ ಸದ್ಬ್ರಹ್ಮದಲ್ಲಿ ಸಮರ್ಪಣೆಮಾಡುವದೇ ಜ್ಞಾನವಿಜ್ಞಾನನಿಷ್ಠೆ .

## ಭೋಕ್ತೃಭೋಗ್ಯಭೋಗಾದಿವಿಭಾಗ

ಭೋಕ್ತಾ ಸತ್ತ್ವಗುಣಃ ಶುದ್ಧೋ ಭೋಗಾನಾಂ ಸಾಧನಂ ರಜಃ ॥೫೦॥
ಭೋಗ್ಯಂ ತಮೋಗುಣಂ[3] ಪ್ರಾಹುರಾತ್ಮಾ ಚೈಷಾಂ ಪ್ರಕಾಶಕಃ[4] ॥೫೧॥

1. ಕಾರಣೋಪಾಧಿಯಿಲ್ಲದ ತತ್ಪದಾರ್ಥಜ್ಞಾನ, ಕಾರ್ಯೋಪಾಧಿಯಿಲ್ಲದ ತ್ವಂಪದಾರ್ಥದ ಜ್ಞಾನ– ಇವುಗಳಿಗೆ ಕ್ರಮವಾಗಿ ಜ್ಞಾನ, ವಿಜ್ಞಾನ– ಎಂಬ ಹೆಸರನ್ನು ಇಲ್ಲಿ ಕೊಟ್ಟಿದೆ. ಇವುಗಳ ಐಕ್ಯದ ಜ್ಞಾನವನ್ನು ಜ್ಞಾನವಿಜ್ಞಾನವೆಂದು ಕರೆದಿದೆ. ಈ ಬಗೆಯ ವಿಭಾಗವು ಪ್ರಸ್ಥಾನತ್ರಯಭಾಷ್ಯದಲ್ಲಿ ಎಲ್ಲಿಯೂ ಇಲ್ಲ. 2. ಈ ಜ್ಞಾನಾಜ್ಞಾನವಿಭಾಗವು ಭಾಷ್ಯದಲ್ಲಿ ಕಾಣುವದಿಲ್ಲ.

3. 'ತಮೋಗುಣಃ' ಎಂಬಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿರುತ್ತದೆ.

4. ಇಲ್ಲಿಗೆ ಅಚ್ಚಿನ ಪುಸ್ತಕದಂತೆ ೫೦ ೧/೨ ಶ್ಲೋಕವಾಯಿತು ; ಆದರೂ ಅರ್ಥಕ್ಕನುಗುಣವಾಗಿ ಅರ್ಧಶ್ಲೋಕವನ್ನೇ ಒಂದೆಂದು ಹಿಡಿದು ಮುಂದಕ್ಕೆ ಸಂಖ್ಯೆ ಬದಲಾಯಿಸಿರುತ್ತೇವೆ.

೫೦–೫೧. ಭೋಕ್ತೃವು ಸತ್ತ್ವಗುಣದಿಂದಾಗಿರುವದರಿಂದ ಶುದ್ಧನು, ಭೋಗಗಳಿಗೆ ಸಾಧನವಾಗಿರುವದು ರಜಸ್ಸು, ಭೋಗ್ಯವು ತಮೋಗುಣವೆಂದು ಹೇಳುವರು. ಈ (ಮೂರನ್ನೂ) ಬೆಳಗುವವನೇ ಆತ್ಮನು.[1]

## ಜ್ಞಾನಿಯೇ ನಿಜವಾಗಿ ಆಶ್ರಮಿಯು

**ಬ್ರಹ್ಮಾಧ್ಯಯನಸಂಯುಕ್ತೋ ಬ್ರಹ್ಮಚರ್ಯರತಃ ಸದಾ ।**
**ಸರ್ವಂ ಬ್ರಹ್ಮೇತಿ ಯೋ ವೇದ ಬ್ರಹ್ಮಚಾರೀ ಸ ಉಚ್ಯತೇ ॥೫೨॥**

೫೨. ಬ್ರಹ್ಮಾಧ್ಯಯನದಿಂದೊಡಗೂಡಿ[2] ಬ್ರಹ್ಮಚರ್ಯದಲ್ಲಿ[3] ಯಾವಾಗಲೂ ನಿರತನಾಗಿ ಎಲ್ಲವೂ ಬ್ರಹ್ಮವೇ ಎಂದು ಯಾವನು ಅರಿತು ಕೊಂಡಿರುವನೋ ಅವನೇ ಬ್ರಹ್ಮಚಾರಿಯೆನಿಸುವನು.

**ಗೃಹಸ್ಥೋ ಗುಣಮಧ್ಯಸ್ಥಃ[4] ಶರೀರಂ ಗೃಹಮುಚ್ಯತೇ ।**
**ಗುಣಾಃ ಕುರ್ವನ್ತಿ ಕರ್ಮಾಣಿ ನಾಹಂ ಕರ್ತೇತಿ ಬುದ್ಧಿಮಾನ್ ॥೫೩॥**

೫೩. ಗುಣಗಳ ನಡುವೆಯಿರುವವನಾಗಿರುವವನು ಗೃಹಸ್ಥನು ; ಶರೀರವೇ ಗೃಹವೆನಿಸುವದು. ಗುಣಗಳೇ ಕರ್ಮಗಳನ್ನು ಮಾಡುತ್ತವೆ, ನಾನು ಕರ್ತೃವಲ್ಲ – ಎಂಬ ಅರಿವುಳ್ಳವನು (ನಿಜವಾದ ಗೃಹಸ್ಥನು).

**ಕಿಮುಗ್ರೈಶ್ಚ ತಪೋಭಿಶ್ಚ ಯಸ್ಯ ಜ್ಞಾನಮಯಂ ತಪಃ ।**
**ಹರ್ಷಾಮರ್ಷವಿನಿರ್ಮುಕ್ತೋ ವಾನಪ್ರಸ್ಥಃ ಸ ಉಚ್ಯತೇ[5] ॥೫೪॥**

---

1. ಈ ಭೋಕ್ತ್ರಾದಿಗಳನ್ನು ಗುಣತ್ರಯಕ್ಕೆ ಹಂಚಿರುವ ಕ್ರಮವೂ ಭಾಷ್ಯದಲ್ಲಿಲ್ಲ.

2. ಸಾಧಾರಣಬ್ರಹ್ಮಚಾರಿಯು ಬ್ರಹ್ಮಾಧ್ಯಯನವನ್ನು ಎಂದರೆ ವೇದಾಧ್ಯಯನವನ್ನು ಮಾಡುತ್ತಿರುವನು ; ಜ್ಞಾನಿಯು ಬ್ರಹ್ಮಾಧ್ಯಯನವನ್ನು ಎಂದರೆ ಬ್ರಹ್ಮಸ್ಮರಣೆಯನ್ನೇ ಮಾಡುತ್ತಿರುತ್ತಾನೆ.

3. ಮಿಕ್ಕ ಬ್ರಹ್ಮಚಾರಿಗಳು ಅಷ್ಟಾಂಗಮೈಥುನರಾಹಿತ್ಯವೆಂಬ ಬ್ರಹ್ಮಚರ್ಯದಲ್ಲಿರುವರು ; ಜ್ಞಾನಿಯ ಚಿತ್ತವು ಬ್ರಹ್ಮದಲ್ಲಿಯೇ ಸಂಚರಿಸುವದೆಂಬ ಬ್ರಹ್ಮಚರ್ಯದಲ್ಲಿರುತ್ತದೆ.

4. ಇದು 'ಗೃಹಮಧ್ಯಸ್ಥಃ' ಎಂದಿದ್ದರೆ ಉತ್ತಮ. ಗೃಹದೊಳಗಿರುವವನು ಗೃಹಸ್ಥನು, ಶರೀರವೇ ಗೃಹವು – ಎಂದು ಆಗ ಅನುವಾದ.

5. 'ಸ ಗೃಹೀ ಯೋ ಗೃಹಾತೀತಃ ಶರೀರಂ ಗೃಹಮುಚ್ಯತೇ' ಎಂಬ ಶ್ಲೋಕಾರ್ಧವು ಇದರ ಮುಂದೆ ಅಚ್ಚಿನ ಪಾಠದಲ್ಲಿರುವದು ಹೆಚ್ಚೆಂದು ಬಿಟ್ಟಿದೆ.

೫೪. ಯಾವನಿಗೆ ಜ್ಞಾನಮಯವಾದ ತಪಸ್ಸಿರುವದೋ ಅವನಿಗೆ ಉಗ್ರವಾದ ತಪಸ್ಸುಗಳಿಂದ ಏನು ಪ್ರಯೋಜನ ? ಹರ್ಷ, ಕ್ರೋಧ ಇವುಗಳಿಲ್ಲದವನೇ ವಾನಪ್ರಸ್ಥನೆನಿಸುವನು.

## ಉಪಸಂಹಾರ

ಸದಾಚಾರಮಿಮಂ ನಿತ್ಯಂ ಯೇಽನುಸಂದಧತೇ[1] ಬುಧಾಃ ।
ಸಂಸಾರಸಾಗರಾಚ್ಛೀಘ್ರಂ ತೇ ಮುಕ್ತಾ ನಾತ್ರ ಸಂಶಯಃ ॥೫೫॥

೫೫. ಈ 'ಸದಾಚಾರ' (ಗ್ರಂಥವನ್ನು) ನಿತ್ಯವೂ ಯಾವ ವಿವೇಕಿಗಳು ಅನುಸಂಧಾನಮಾಡುತ್ತಿರುವರೋ ಅವರು ಸಂಸಾರಸಾಗರದಿಂದ ಬೇಗನೆ ಮುಕ್ತರಾಗುವರು ; ಇದಕ್ಕೆ ಸಂಶಯವಿಲ್ಲ.

ಓಂ ತತ್ಸತ್

----

1. ಈ ಮಾತು ಬಹುವಚನ ; ಇದಕ್ಕೆ ತಕ್ಕಂತೆ ಅಚ್ಚಿನ ಪಾಠವನ್ನು ತಿದ್ದಿಕೊಂಡಿದೆ.

# ಶ್ಲೋಕಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳಲ್ಲಿ ಮೊದಲನೆಯದು ಶ್ಲೋಕಸಂಖ್ಯೆಯನ್ನೂ ಎರಡನೆಯದು ಪುಟಸಂಖ್ಯೆಯನ್ನೂ ಸೂಚಿಸುವವು.


| ಪ್ರತೀಕಗಳು | ಶ್ಲೋಕ | ಪುಟ | ಪ್ರತೀಕಗಳು | ಶ್ಲೋಕ | ಪುಟ |
|---|---|---|---|---|---|
| ಅಜ್ಞಾನಂ ಚಾನ್ಯಥಾ ಲೋಕೇ | ೪೮ | ೧೪ | ತಾರ್ಕಿಕಾಣಾಂ ತು ಜೀವೇಶೌ | ೨೬ | ೮ |
| ಅಜ್ಞಾನಂ ಭ್ರಮ ಇತ್ಯಾಹುಃ | ೪೦ | ೧೨ | ತ್ರಿಪುಟೀ ಕ್ಷೀಣತಾಮೇತಿ | ೩೯ | ೧೨ |
| ಅತ್ಯನ್ತಮಲಿನೋ ದೇಹೋ | ೬ | ೨ | ದೇಹಾಭ್ಯಾಸೋ ಹಿ ಸಂನ್ಯಾಸಃ | ೧೬ | ೫ |
| ಅತೀತಾನಾಗತಂ ಕಿಂಚಿತ್ | ೧೫ | ೫ | ದೇಹೋ ದೇವಾಲಯಃ ಪ್ರೋಕ್ತಃ | ೧೩ | ೪ |
| ಅಥಾಘಮರ್ಷಣಂ ಕುರ್ಯಾತ್ | ೮ | ೩ | ನ ತ್ವಂ ದೇಹೋ ನೇನ್ದ್ರಿಯಾಣಿ | ೨೧ | ೭ |
| ಅರ್ಥಾಕಾರಾ ಭವೇದ್ವೃತ್ತಿಃ | ೩೪ | ೧೧ | ನಿರಾಧಾರಾ ನಿರ್ವಿಕಾರಾ | ೩೭ | ೧೧ |
| ಅನ್ವಯವ್ಯತಿರೇಕಾಭ್ಯಾಂ | ೪ | ೨ | ಪದಯೋರೈಕ್ಯಬೋಧಸ್ತುಳ೭ | ೧೪ | |
| ಅನ್ಯೇ ಪಾಷಣ್ಡಿನಃ ಸರ್ವೇ | ೨೯ | ೯ | ಪ್ರಮಾತಾ ಚ ಪ್ರಮಾಣಂ ಚ | ೩೩ | ೧೦ |
| ಅಭಯಂ ಸರ್ವಭೂತಾನಾಂ | ೧೭ | ೬ | ಪ್ರಾತಃ ಸ್ಮರಾಮಿ ದೇವಸ್ಯ | ೩ | ೧ |
| ಅಹನ್ಯಾಗರ್ಜನಂ ತತ್ರ | ೪೨ | ೧೨ | ಬ್ರಹ್ಮಾಧ್ಯಯನಸಂಯುಕ್ತೋ | ೫೨ | ೧೫ |
| ಅಹಂಮಮೇತ್ಯಯಂ ಬನ್ಧಃ | ೩೦ | ೧೦ | ಭೋಗ್ಯಂ ತಮೋಗುಣಂ ಪ್ರಾಹುಃ | ೫೧ | ೧೪ |
| ಆತ್ಮನಿ ಸ್ವಪ್ರಕಾಶಾಗ್ನೌ | ೧೨ | ೪ | ಮನ್ಮನೋ ಮಾನವನ್ನಿತ್ಯಂ | ೭ | ೨ |
| ಆತ್ಮನೋ ಬ್ರಹ್ಮಣಃ ಸಮ್ಯಕ್ | ೪೬ | ೧೩ | ಮೌನಂ ಸ್ವಾಧ್ಯಯನಂ ಧ್ಯಾನಂ | ೧೪ | ೫ |
| ಆತ್ಮಾನಾತ್ಮವಿವೇಕೇನ | ೨೦ | ೭ | ಯತ್ತತ್ತು ವೃತ್ತಿಜಂ ಜ್ಞಾನಂ | ೪೯ | ೧೪ |
| ಈಶ್ವರಂ ಮಾಯಿನಂ ವಿದ್ಯಾತ್ | ೪೧ | ೧೨ | ಲಯವಿಕ್ಷೇಪಯೋಃ ಸನ್ಧೌ | ೯ | ೩ |
| ಏಕಮೇವಾದ್ವಯಂ ಬ್ರಹ್ಮ | ೪೪ | ೧೩ | ವಿಜ್ಞಾನಂ ಚೋಭಯೋರೈಕ್ಯಂ | ೪೫ | ೧೩ |
| ಕರ್ಮಶಾಸ್ತ್ರೇ ಕುತೋ ಜ್ಞಾನಮ್ | ೨೮ | ೯ | ವಿಶುದ್ಧಂ ಕೇವಲಂ ಜ್ಞಾನಂ | ೨೨ | ೭ |
| ಕಾರ್ಯಕಾರಣವಾಚ್ಯಾಂಶೌ | ೨೭ | ೯ | ವೃತ್ತಿವ್ಯಾಪ್ಯತ್ವಮೇವಾಸ್ತು | ೩೫ | ೧೧ |
| "ಕಿಮುಗ್ರೈಶ್ಚ ತಪೋಭಿಶ್ಚ | ೫೪ | ೧೫ | ವೇದಾನ್ತಶ್ರವಣಂ ಕುರ್ಯಾತ್ | ೧೮ | ೬ |
| ಗೃಹಸ್ಥೋ ಗುಣಮಧ್ಯಸ್ಥಃ | ೫೩ | ೧೫ | ಶಬ್ದಶಕ್ತೇರಚಿನ್ತ್ಯತ್ವಾತ್ | ೧೯ | ೬ |
| ಚಿತ್ತಂ ಚೈತನ್ಯಮಾತ್ರೇಣ | ೩೬ | ೧೧ | ಶಬ್ದಸ್ಯಾದ್ಯನ್ತಯೋಃ ಸಿದ್ಧಂ | ೨೩ | ೮ |
| ಚಿನ್ಮಾತ್ರೈಕರಸೇ ವಿಷ್ಣೌ | ೨೫ | ೮ | ಸಂಕಲ್ಪಸಾಕ್ಷಿ ಯಜ್ಜ್ಞಾನಂ | ೩೨ | ೧೦ |
| ಜ್ಞಾನಮೇಕಂ ಸದಾ ಭಾತಿ | ೩೧ | ೧೦ | ಸಚ್ಚಿದಾನನ್ದಕನ್ದಾಯ | ೧ | ೧ |
| ಜ್ಞಾನವಿಜ್ಞಾನನಿಷ್ಠೇಯಂ | ೫೦ | ೧೪ | ಸದಾಚಾರಮಿಮಂ ನಿತ್ಯಂ | ೫೫ | ೧೬ |
| ಜ್ಞಾನಾಜ್ಞಾನವಿಲಾಸೋಽಯಂ | ೫ | ೨ | ಸರ್ವತ್ರ ಪ್ರಾಣಿನಾಂ ದೇಹೇ | ೧೦ | ೩ |
| ತಕಾರೋ ವಿಷಯಾಧ್ಯಾಸೋ | ೩೮ | ೧೨ | ಸರ್ವವೇದಾನ್ತಸಿದ್ಧಾನ್ತೈಃ | ೨ | ೧ |
| ತರ್ಪಣಂ ಸ್ವಸುಖೇನೈವ | ೧೧ | ೪ | ಸ್ಥೂಲವೈರಾಜಯೋರೈಕ್ಯಂ | ೨೪ | ೮ |
| ತಸ್ಯಾ ವೃಷ್ಟೇರ್ವಿರಾಮಾಯ | ೪೩ | ೧೩ | | | |

## ಶ್ಲೋಕಾನುಕ್ರಮಣಿಕೆ

ಇಲ್ಲಿ * ಹೀಗೆ ನಕ್ಷತ್ರಚಿಹ್ನೆಯನ್ನು ಹಾಕಿದ್ದರೆ ಆಯಾ ಶಬ್ದವು ಭಾಷ್ಯದಲ್ಲಿ ಪ್ರಚುರವಾಗಿಲ್ಲವೆಂದು ಅಭಿಪ್ರಾಯ.


೧. *ಅಜ್ಞಾನಮಾಯೇ–
ಅವಿದ್ಯಾಮಾಯೆಗಳು, ೨೪

೨. ಅದ್ವಯಮ್–
ಎರಡನೆಯದಿಲ್ಲದ ೨೨, ೪೪.

೩. ಅನ್ವಯವ್ಯತಿರೇಕೌ–
ಅನುಸರಿಸಿಕೊಂಡಿರುವದು. ಬಿಟ್ಟೂ ಇರುವದು ಎಂಬಿವು, ೪, ೪೮.

೪. ಆತ್ಮಾನಾತ್ಮವಿವೇಕಃ–
ಆತ್ಮ ಅನಾತ್ಮ– ಇವುಗಳನ್ನು ಬಿಡಿಸಿ ತಿಳಿಯುವದು, ೨೦.

೫. *ಉನ್ಮನೀ–
ಮನಸ್ಸನ್ನು ಮೀರಿದ ಆತ್ಮಸ್ಥಿತಿ, ೩೭.

೬. ಉಪಾಧಿದ್ವಯಮ್–
ಆತ್ಮನ ಮತ್ತು ಬ್ರಹ್ಮದ ಎರಡು ಉಪಾಧಿಗಳು, ೪೬.

೭. ಕ್ಷೇತ್ರಜ್ಞಪರಮಾತ್ಮಾನೌ–
ಜೀವ, ಪರಮಾತ್ಮ – ಇವರು, ೪೫.

೮. *ಚಿನ್ಮಾತ್ರೈಕರಸಃ–
ಜ್ಞಾನಮಾತ್ರವೊಂದೇ ಆಗಿರುವ, ೨೫.

೯. *ಜ್ಞಾನಾಜ್ಞಾನವಿಲಾಸಃ–
ಜ್ಞಾನ, ಅಜ್ಞಾನ– ಇವುಗಳ ಕಾರ್ಯ, ೫.

೧೦. ತ್ರಿಪುಟೀ–
ಜ್ಞಾತೃಜ್ಞಾನಜ್ಞೇಯಗಳೆಂಬ ವಿಭಾಗ, ೩೯.

೧೧. ದೃಗ್ದೃಶ್ಯೌ–
ನೋಡುವದು, ನೋಡಲ್ಪಡತಕ್ಕದ್ದು, ೪೩.

೧೨. *ದೇಹಾಭ್ಯಾಸಃ–
ದೇಹವೇ ನಾನೆಂಬ ಅರಿವಿನ ಅಭ್ಯಾಸ, ೧೬.

೧೩. ನಿರ್ವಿಶೇಷಮ್–
ಜಾತಿದ್ರವ್ಯಾದಿವಿಶೇಷಗಳಿಲ್ಲದ, ೨೨.

೧೪. ನ್ಯಾಸಲಕ್ಷಣಮ್–
ಸಂನ್ಯಾಸದ ಲಕ್ಷಣ, ೧೬.

೧೫. *ಫಲವ್ಯಾಪ್ತಿಃ–
ಚಿದಾಭಾಸದಿಂದ ಬೆಳಗಲ್ಪಡುವದು, ೩೫.

೧೬. ಯೋಗಃ–
ನಿದಿಧ್ಯಾಸನ, ೧೮.

೧೭. ಯೋಗಿನಃ–
ಸಾಧಕರು, ಮುಮುಕ್ಷುಗಳು, ೨.

೧೮. ಲಯವಿಕ್ಷೇಪೌ–
ಮನಸ್ಸು ಕಾಣದೆಹೋಗುವದು, ಹೊರ ತೋರುವದು, ೯.

೧೯. *ವೃತ್ತಿವ್ಯಾಪ್ಯತ್ವಮ್–
ವೃತ್ತಿಗೆ ವಿಷಯನಾಗುವದು, ೩೫.

೨೦. ಶಬ್ದಬ್ರಹ್ಮ–
ವೇದ, ೨೦.

೨೧. *ಸಂಕಲ್ಪಸಾಕ್ಷಿ–
ಸಂಕಲ್ಪಗಳನ್ನು ನೇರಾಗಿ ನೋಡುವ ಆತ್ಮಚೈತನ್ಯ, ೩೨.

೨೨. ಸಚ್ಚಿದಾನನ್ದಕನ್ದಃ–
ಸಚ್ಚಿದಾನಂದವೆಂಬ ಬೇರು, ೧.

೨೩. ಸಮ್ಯಗ್ವಿಜ್ಞಾನಮ್–
ಸರಿಯಾದ ಅರಿವು, ೭.

೨೪. ಸಾಕ್ಷೀ–
ನೇರಾಗಿ ನೋಡುವ ಆತ್ಮ, ೨೩.